೧೨-೦೦ ಪಿ.ಎಂ.

ಪ್ರಕಟಣೆ

ಸದಸ್ಯರು ಗೈರು ಹಾಜರಿ

ಅಧ್ಯಕ್ಷರು.—ಮಾನ್ಯ ವಿಧಾನ ಸಭಾ ಸದಸ್ಯರಾದ ಸಾಲೇರ್ ಎಸ್. ಸಿದ್ದಪ್ಪನವರು ತಮ್ಮ ಅನಾರೋಗ್ಯದ ಕಾರಣವಾಗಿ ವಿಧಾನ ಸಭಾ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ.

"ಶ್ರೀ ಸಾಲೇರ್ ಎಸ್. ಸಿದ್ದಪ್ಪನವರಿಗೆ ವಿಧಾನ ಸಭೆಯ ಪ್ರಸ್ತುತ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೆ" ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.—ಗೈರು ಹಾಜರಾಗಲು ಶ್ರೀ ಸಾಲೇರ್ ಎಸ್. ಸಿದ್ದಪ್ಪನವರಿಗೆ ಅನುಮತಿ ನೀಡಲಾಗಿದೆ.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಲೋಕಾಯುಕ್ತದ ನಡವಳಿಕೆಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವುದರ ಬಗ್ಗೆ ಮತ್ತು ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಹರಿಜನರ ಗುಡಿಸಲುಗಳನ್ನು ಭಸ್ಮ ಮಾಡಿರುವುದು.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ.

ಅಧ್ಯಕ್ಷರು.—ನಾನು ಹೇಳುತ್ತೇನೆ, ದಯವಮಾಡಿ ಮಾನ್ಯ ಸದಸ್ಯರು ಸ್ವಲ್ಪ ಕುಳಿತುಕೊಳ್ಳಬೇಕು.

"ಕರ್ನಾಟಕ ರಾಜ್ಯದ ಲೋಕಾಯುಕ್ತರು ಇತ್ತೀಚೆಗೆ ಲೋಕಾಯುಕ್ತದ ನಿಯಮಂ ೧೬ಕ್ಕೆ ವಿರುದ್ಧವಾಗಿ ಕೆಲವು ಪತ್ರಿಕೆಗಳಿಗೆ ಲೋಕಾಯುಕ್ತದ ನಡವಳಿಕೆಗಳನ್ನು ಬಿಡುಗಡೆ ಮಾಡಿ ಲೋಪಪಡೆಸಿರುವ ಲೋಕಾಯುಕ್ತರ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸಲು"

ಅವಕಾಶಕೊಡಬೇಕು ಎನ್ನುವ ಬಗ್ಗೆ ನೋಟೀಸ್ ಕೊಟ್ಟಿದ್ದೀರಿ, ಅದು ಈ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದ್ದರಿಂದ. ಇದರ ಬಗ್ಗೆ ನಾನು ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ನಾನು ಕೊಟ್ಟಿರತಕ್ಕ ಸಬ್ಜೆಕ್ಟ್ ಬೇರೆ ಇದೆ, ಇದಂ ಸಂಬಂಧ ಅಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ. ಲೋಕಾಯುಕ್ತ ವಿಚಾರದಲ್ಲಿ...

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು, ನಾನು ವಿಚಾರ ಏನು ಎನ್ನುವುದನ್ನು ಹೇಳುತ್ತೇನೆ.

"ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ನೂರಾರು ಹರಿಜನರ ಗುಡಿಸಲುಗಳನ್ನು ವೇಲ್ಫಾತಿಯವರು, ಭೂಮಾಲೀಕರು ಕೆಲವು ದಿನಗಳ ಹಿಂದೆ ಸುಟ್ಟು ಹಾಕಿ ಅನೇಕರನ್ನು ಗಾಯಗೊಳಿಸಿರುವುದರಿಂದ ಉದ್ಭವವಾಗಿರುವ ಗಂಭೀರ ಪರಿಸ್ಥಿತಿಯನ್ನು ವಂತ್ತು ಹರಿಜನ ಗಿರಿಜನರಿಗೆ, ದುರ್ಬಲವರ್ಗದವರಿಗೆ, ಸರ್ಕಾರ ತೋರುತ್ತಿರುವ ವೈಫಲ್ಯತೆಯನ್ನು ಚರ್ಚಿಸಲು ಈ ಸಭೆಯನ್ನು ಮುಂದೂಡಬೇಕೆಂದು ವಿನಂತಿಸುತ್ತೇನೆ."

ಎಂದು ಹೇಳಿದ್ದೀರಿ. ಆದ್ದರಿಂದ, ನಿಮ್ಮದು ಕೂಡ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದ್ದರಿಂದ ಇದರ ಬಗ್ಗೆಯೂ ಸಹ ನಾನು ಅನುಮತಿಯನ್ನು ನಿರಾಕರಣೆ ಮಾಡಿರುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ನಾವು ಸ್ವಲ್ಪ ಹೇಳಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.–ಮೊದಲಿನ ಸಾಲಿನಲ್ಲಿರುವವರು ಬಹಳ ಅನುಭವವುಳ್ಳವರಿದ್ದೀರಿ ಅದೇ ರೀತಿ ನಿಮ್ಮ ಹಿಂದಿನ ಬೆಂಚಿನಲ್ಲಿರುವವರು ಬಹಳ ಅನುಭವವುಳ್ಳವರಿದ್ದಾರೆ, ಅಲ್ಲದೆ ಕೆಲವರು ಮಾಜಿ ಮಂತ್ರಿಗಳೂ ಸಹ ಇದ್ದೀರಿ. ಈಗ ನಾನು ತಮಗೆ ಏನು ರೂಲ್ ಹೇಳುತ್ತೇನೆ, ಅದೆಲ್ಲಾ ತಮಗೆ ಗೊತ್ತಿರುತ್ತದೆ. ಮಾನ್ಯ ಕೃಷ್ಣನ್‌ರವರೆ, ತಾವು ಕೊಟ್ಟಿರತಕ್ಕ ನಿಲುವಳಿ ಸೂಚನೆಯನ್ನು ಓದಿ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದೂ ಹೇಳಿದ್ದೇನೆ. ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಬಹಳಷ್ಟು ಕೆಲಸ ನಾವು ಮಾಡಿಯೂವುದು ಉಂಟು, ನೀವೂ ಮಾಡಿಯೂವುದೂ ಉಂಟು. ಆದ್ದರಿಂದ, ಈ ವಿಚಾರವನ್ನು ನಿಮ್ಮ ನೆನಪಿಗೆ ತರುತ್ತೇನೆ.

> "When the Speker withholds his consent to the moving of an adjournment motion in is chamber, it is neither obligatory to read out the motion to the House nor give the reasons for refusing the consent. After a member is informed of the Speaker's decision withholding his consent, no question is permitted to be raised in the House either on the subject matter of the notice or the reasons for disallowance thereof. If, however, a member would like to make a submission to the Speaker to reconsider his decision, he can do so either in person to the Speaker in his chamber later during the day or by submitting a written representation to the Speaker in that behalf. In case the Speaker is satisfied on the submission of the member that there are adequate grounds to bring up the matter before the House, he would either mention it or permit the member to raise it on the following day irrespective of the fact that the notice had been given on the previous day."

ಆದ್ದರಿಂದ ಇದಕ್ಕಾಗಿ ನಿಮಗೆ ಮತ್ತೊಮ್ಮೆ ನೆನಪು ಮಾಡಿಕೊಟ್ಟಿದ್ದೇನೆ. ದಯವಿಟ್ಟು ತಾವುಗಳು ಆಸೀನರಾಗಬೇಕು. ಮುಂದೆ ಕಾಲಿಂಗ್ ಅಟೆನ್‌ಷನ್ ಇವೆ ಆ ಮೇಲೆ ಹಿರಿಯರ ನೋಟೀಸ್‌ಗಳು ಇವೆ. ಆನಂತರ ರಾಜ್ಯಪಾಲರ ಭಾಷಣದ ಮೇಲೆ ಮಹತ್ವಪೂರ್ಣವಾದ ಚರ್ಚೆ ನಿಮ್ಮಿಂದ ಆಗಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ —ಮುಂದಿನ ಕಾರ್ಯಕಲಾಪಗಳ ಬಗ್ಗೆ ನಮಗೆ ಸುತ್ತೋಲೆ ಬಂದಿದೆ. ಅದನ್ನು ತಾವು ಮತ್ತೊಂದು ಸಾರಿ ಹೇಳತಕ್ಕ ಅವಶ್ಯಕತೆ ಇಲ್ಲ. ತಮಗೆ ಇನ್ನೊಂದು ವಿಚಾರ ಹೇಳಬೇಕಾಗಿದೆ. ನಮಗೆ ಇರುವಂತಹ ಅಪಾರವಾದ ಅನುಭವವನ್ನು ಗುರುತಿಸಿದ್ದಕ್ಕೋಸ್ಕರ ಮತ್ತೊಮ್ಮೆ ತಮ್ಮನ್ನು ವಿರೋಪಕ್ಷದ ಪರವಾಗಿ ಅಭಿನಂದಿಸುತ್ತೇನೆ. ಆದರೆ ತಾವು ನಮ್ಮ ನಿಲುವಳಿ ಸೂಚನೆಯ ನೋಟೀಸ್‌ಗೆ ಕೊಟ್ಟಿರತಕ್ಕ ಉತ್ತರ ಏನು ಇದೆ, ಆ ಉತ್ತರದಲ್ಲಿ ತಾವು ಏನು ಹೇಳಿದ್ದೀರೆಂದರೆ, ಲೋಕಾಯುಕ್ತದ ಪ್ರೊಸೀಡಿಂಗ್ಸ್ ವಿಚಾರದಲ್ಲಿ ಅದು ಪಬ್ಲಿಕ್ ಇಂಪಾರ್ಟೆನ್ಸ್ ಅಲ್ಲ ಎನ್ನುವ ಕಾರಣಕ್ಕಾಗಿ this is the only ground on which you have rejected permission to move the adjournment motion. ಆ ದೃಷ್ಟಿಯಿಂದ ಇದರ ಬಗ್ಗೆ ತಮ್ಮ ರೂಲಿಂಗ್‌ನ್ನು ಕೊಟ್ಟಮೇಲೆ ಅದನ್ನು ಒಪ್ಪುವಂತಹ ಅಭಿಪ್ರಾಯ ಇದ್ದರೂ ಕೂಡ ತಮ್ಮ ಅಪಾರವಾದ ಅನುಭವದ ವ್ಯಾಪ್ತಿಯಲ್ಲಿ.

ಅಧ್ಯಕ್ಷರು.—ನಿಮ್ಮಂತ ಅನುಭವ ಇರುವವರು ವಿಚಾರದಲ್ಲಿ ಯಾವುದೇ ವಿಷಯವನ್ನು ಚರ್ಚೆ ಮಾಡಬೇಕಾದರೂ ನಿಯಮಾವಳಿಗಳ ಪರಿಶೀಲನೆಯನ್ನು ಎತ್ತಿ ಹಿಡಿಯುತ್ತೀರೆಂಬ ಪೂರ್ಣ ವಿಶ್ವಾಸ ನನಗಿದೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಅಪಾರವಾದ ಅನುಭವದ ಹಿನ್ನೆಲೆಯಲ್ಲಿ ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹಿಂದೆ ಇದೇ ಸದನದಲ್ಲಿ ಎಷ್ಟೋ ಸಾರಿ ತಾವು ಕೊಟ್ಟಂತಹ ರೂಲಿಂಗನ್ನು ಪುರ್ನವಿಮರ್ಶೆ ಮಾಡಬೇಕೆಂದು ಕೇಳಿಕೊಂಡಿದ್ದುಂಟು. ಅದನ್ನು ತಾವು ಪರಿಗಣಿಸಿದ್ದೂ ಉಂಟು.

ಅಧ್ಯಕ್ಷರು.—ನೀವು ಹೇಳತಕ್ಕ ವಿಚಾರಗಳನ್ನು ಹೇಳುವುದಕ್ಕೆ ನಿಮಗೂ ಅಧಿಕಾರ ಇದೆ. ಅದನ್ನು ಕೇಳುವುದಕ್ಕೂ ನಾನು ತಯಾರಾಗಿದ್ದೇನೆ. ಆದರೆ ಇಲ್ಲಿ ಅಲ್ಲ. ನನ್ನ ಚೇಂಬರ್‌ನಲ್ಲಿ.

ಶ್ರೀ ಎಸ್. ಬಂಗಾರಪ್ಪ.—ಅಲ್ಲಿ ಕೇಳತಕ್ಕ ವಿಚಾರವನ್ನೂ ಅಲ್ಲೂ ಕೇಳಿತ್ತೇವೆ. ತಮ್ಮ ಅನುಮತಿಯನ್ನು ಪಡೆದೇ ಇಲ್ಲೂ ವಿಚಾರವನ್ನೂ ಪ್ರಸ್ತಾಪ ಮಾಡುತ್ತಿದ್ದೇವೆ. ತಾವು ಈಗ ಕೊಟ್ಟಂತಹ ರೂಲಿಂಗನ್ನು ಅಥವಾ ತಮ್ಮ ತೀರ್ಪನ್ನು ಮತ್ತೊಂದು ಸಾರಿ ಬದಲಾವಣೆ ಮಾಡಬೇಕು. ಲೋಕಾಯುಕ್ತಕ್ಕೆ ಸಂಬಂಧಪಟ್ಟಿರತಕ್ಕ ವಿಚಾರ ಇದು. ಅದರ ವ್ಯವಸ್ಥೆಯ ಬಗ್ಗೆ ವಿಚಾರಗಳು ಏನೇ ಇದ್ದರೂ ಅದನ್ನು ಇಲ್ಲಿ ಎತ್ತತಕ್ಕ ಹಕ್ಕು ಈ ಸದನಕ್ಕಿದೆ, ಆದ್ದರಿಂದ ತಾವು ದಯಮಾಡಿ ಆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಅತ್ಯಂತ ಪ್ರಮುಖವಾಗಿರತಕ್ಕದ್ದು ಲೋಕಾಯುಕ್ತದ ಪ್ರೊಸಿಡಿಂಗ್ಸ್ ವಿಚಾರ ಆದರೆ ತಾವು ಸಾರ್ವಜನಿಕ ದೃಷ್ಟಿಯಿಂದ ಇದು ಅಲ್ಲ ಎನ್ನತಕ್ಕ ಅಭಿಪ್ರಾಯಂ ಪಟ್ಟಿರುವುದು ಸಮಂಜಸವಾದುದಲ್ಲ. ಏಕೆಂದರೆ ಹಿಂದೆ ವಿಜಿಲೆನ್ಸ್ ಕಮೀಷನ್ ಇದ್ದಂತಹ ಜಾಗದಲ್ಲಿ ಇದಂ ಇದೆ...

ಅಧ್ಯಕ್ಷರು.—ಇಲ್ಲಿ ಸಮಂಜಸವಾದುದಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪ ಇದೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಏನಾದರೂ ಹೇಳುವುದಿದ್ದರೆ ನನ್ನ ಛೇಂಬರ್‌ನಲ್ಲಿ ಹೇಳಿ, ಇಲ್ಲಿ ಆ ರೀತಿ ಸಮಂಜಸವಾದುದಲ್ಲವೆಂದು ಹೇಳುವುದು ಸರಿಯಲ್ಲ, ಯಾವ ಸ್ಪೀಕರೇ ಆಗಿರಲಿ,ಅವರು ಒಮ್ಮೆ ಇಲ್ಲಿ ಕೊಟ್ಟಂತಹ ರೂಲಿಂಗನ್ನು ಸಮಂಜಸವಾದುದಲ್ಲವೆಂದು ಹೇಳುವುದು ಸರಿಯಾದುದಲ್ಲ. ನನ್ನ ರೂಲಿಂಗನ್ನು ಬದಲಾವಣೆ ಮಾಡಬೇಕೆಂದು ಹೇಳುವುದಾದರೆ, ನನಗೆ ಇನ್ನೊಂದು ಸಾರಿ ನೀವು ಕನ್ವಿನ್ಸ್ ಮಾಡಿ ಹೇಳಬಹುದು. ಅದನ್ನು ಮಾಡುವಂತಹ ಹಕ್ಕು ನಿಮಗೆ ಇದ್ದೇ ಇದೆ. ಆದರೆ ಇಲ್ಲಿ ಅಲ್ಲ, ನನ್ನ ಛೇಂಬರ್‌ನಲ್ಲಿ.

ಶ್ರೀ ಎಸ್. ಬಂಗಾರಪ್ಪ.—ಅದು ನಂತರ ತಮ್ಮ ಛೇಂಬರ್‌ಗೆ ಬಂದು ಮಾತನಾಡುವುದು ಇದ್ದರೆ ಅದನ್ನೂ ಮಾಡೋಣ.

SRI VEDANTHA HEMMIGE.—I am on a point of order.

ಶ್ರೀ ಎಸ್. ಬಂಗಾರಪ್ಪ.—ತಾವು ಎಷ್ಟೋಸಾರಿ ವಿಚಾರವನ್ನು ಎತ್ತುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ದಯಮಾಡಿ ಈ ವಿಚಾರವನ್ನು ಎತ್ತಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಮಾನ್ಯ ವೇದಾಂತ ಹೆಮ್ಮಿಗೆಯವರದ್ದು ಪಾಯಿಂಟ್ ಆಫ್ ಆರ್ಡರ್ ಇದೆ ಅದನ್ನು ಕೇಳೋಣ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಸದಸ್ಯರು ತಂದಿರತಕ್ಕ ವಿಷಯದ ಬಗ್ಗೆ ತಾವು ಈಗಾಗಲೇ ತಮ್ಮ ರೂಲಿಂಗನ್ನು ಕೊಟ್ಟಿದ್ದೀರಿ. ಆ ರೂಲಿಂಗನ್ನು ಈ ಸದನದಲ್ಲಿ ಪ್ರಶ್ನೆ ಮಾಡುವಂತಹ ಹಕ್ಕು ಇಲ್ಲ, ಆದರೆ ಮಾನ್ಯ ಸದಸ್ಯರು ತಮ್ಮ ರೂಲಿಂಗ್‌ನ್ನೇ ಪ್ರಶ್ನೆ ಮಾಡತಕ್ಕ ರೀತಿಯಲ್ಲಿ ಮಾತನಾಡತಕ್ಕ ಧಾಟಿಯಲ್ಲಿ ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ಅವರು ಆ ರೀತಿ ಮಾತನಾಡುವುದು ಒಳ್ಳೆಯದಲ್ಲ. ತಮ್ಮ ರೂಲಿಂಗನ್ನು ಅವರು ಮಾನ್ಯತೆ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಎತ್ತಿರತಕ್ಕ ಪಾಯಿಂಟ್ ಆಫ್ ಆರ್ಡರ್ ವಿಚಾರದಲ್ಲಿ ಸರಿಯಲ್ಲ ಎನ್ನತಕ್ಕ ಅಭಿಪ್ರಾಯಂ ಅಲ್ಲ. ಆದರೆ ಈ ಸದನದಲ್ಲಿ ರೂಲಿಂಗ್ ಕೊಟ್ಟ ಮೇಲೆ ಅದನ್ನು ಮಾನ್ಯತೆ ಮಾಡಬೇಕಂ. ಆದರೆ ಎಷ್ಟೋ ಸಾರಿ ಅದನ್ನು ರೀ ಕನ್ಸಿಡರ್ ಮಾಡಲಿಕ್ಕೆ ನಮ್ಮ ಒತ್ತಾಯ ಇರುತ್ತಿತ್ತು ಎನ್ನುವುದನ್ನು ತಾವು ತಿಳಿಯಬೇಕು. ತಮ್ಮ ಅನುಮತಿಯನ್ನು ಕೋರಿ ತಮ್ಮ ರೂಲಿಂಗ್ ಬಗ್ಗೆ ಮಾತನಾಡಬಹುದು ಎನ್ನುವ ಹಕ್ಕು ಈ ಸದನಕ್ಕೆ ಆಕಡೆಯವರಿಗೂ ಮತ್ತು ಈ ಕಡೆ ಕುಳಿತಿರತಕ್ಕಂಥವರಿಗೂ ಇರುತ್ತದೆ.

ಅಧ್ಯಕ್ಷರು.—ಆದರೆ ಇಲ್ಲಿ ರೂಲಿಂಗ್ ಕೊಟ್ಟಮೇಲೆ ತಾವು ನನ್ನ ಛೇಂಬರ್‌ನಲ್ಲಿ ಬಂದು ರೂಲ್ಸ್ ಮತ್ತು ರೆಗ್ಯುಲೇಷನ್ ಆದರ ಶ್ರೇಷ್ಠತೆ ಏನಿದೆ ಅದನ್ನು ಕನ್‌ವೀನ್ಸ್ ಮಾಡಬಹುದು. ಈಗ ಮಾನ್ಯ ವೇದಾಂತ ಹೆಮ್ಮಿಗೆಯವರು ಮತ್ತು ಮಾನ್ಯ ಲಕ್ಷ್ಮೀಸಾಗರ್‌ರವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರ ಪಾಯಿಂಟ್ ಆಫ್ ಆರ್ಡರ್ ಏನು ಎನ್ನುವುದನ್ನು ಕೇಳೋಣ. ಅವರ ಪಾಯಿಂಟ್ ಆಫ್ ಆರ್ಡರ್ ಕೇಳಿ ಅದರ ಮೇಲೆ ರೂಲಿಂಗ್ ಕೊಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ ನಿಯಮ ೫೯ರ ಪ್ರಕಾರ ನಿಲುವಳಿ ಸೂಚನೆಯನ್ನು ತರತಕ್ಕ ಅರ್ಥದ್ದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಈ ರೀತಿ ನಿಲುವಳಿ ಸೂಚನೆಯನ್ನು ಸಭೆಯ ಮುಂದೆ ಮಂಡಿಸತಕ್ಕ ಸಮಯದಲ್ಲಿ ತಮ್ಮ ಅನುಮತಿಯನ್ನು ಪಡೆದು ಮಂಡಿಸುವುದಕ್ಕೆ ನಿಯಮಾವಳಿಯಲ್ಲಿ ಉಲ್ಲೇಖವಿದೆ. ತಮ್ಮ ಪರವಾನಿಗೆಯನ್ನು ಪಡೆದುಕೊಂಡ ಸಂದರ್ಭದಲ್ಲಿ ತಾವು ಕೊಟ್ಟಿರತಕ್ಕ ಸೂಚನೆಯನ್ನು ಪರಿಶೀಲನೆ ಮಾಡಿ ಆದರಮೇಲೆ ನಿರ್ಣಯ ತೆಗೆದುಕೊಳ್ಳಲಿಕ್ಕೆ ಅಧಿಕಾರವಿದೆ ಎನ್ನುವುದನ್ನು ತಾವು ಈಗಾಗಲೇ ಸೂಚಿಸಿದ್ದೀರಿ. ಈ ರೀತಿಯಾಗಿ ತೀರ್ಮಾನ ಕೊಡತಕ್ಕ ಅಧಿಕಾರ ಸಭಾಧ್ಯಕ್ಷರಿಗೆ ಇದೆ ಎನ್ನುವ ವಿಚಾರದಲ್ಲಿ ಯಾವ ವಿಧವಾದ ಭಿನ್ನಾಭಿಪ್ರಾಯವೂ ಇಲ್ಲವೆಂದು ಭಾವಿಸುತ್ತೇನೆ. ಈ ವಿಷಯದ ಬಗ್ಗೆ ಅಧ್ಯಕ್ಷರ ಅಧಿಕಾರ ಅನಿರ್ಬಾದಿತವಾಗಿದೆ ಎಂದು ತೀರ್ಮಾನವನ್ನು ಕೊಟ್ಟಮೇಲೆ ಈ ತೀರ್ಮಾನವನ್ನು ಬದಲಿಸಬೇಕೆಂದಾಗಲಿ ಅಥವಾ ಸಭೆಯಲ್ಲಿ ಅದರಮೇಲೆ ಚರ್ಚೆ ನಡೆಸಲಿಕ್ಕೆ ಅಧಿಕಾರವೂ ಕೂಡ ಇಲ್ಲವೆಂದು ತಾವು ಹೇಳಿದಮೇಲೆ ಮತ್ತೊಮ್ಮೆ ಮಾನ್ಯ ಬಂಗಾರಪ್ಪನವರು ಹೇಳಿದ ವಿಷಯದ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ, ತಮ್ಮ ಅನುಮತಿಯನ್ನೂ ಕೂಡ ಕೇಳುತ್ತೇನೆ ಎಂದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರಂ ಏನಂ ಹೇಳಿದ್ದಾರೆ ಅದನ್ನು ಅವರು ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ ಅವರು ಏನು ಹೇಳುತ್ತಾರೆ ಅದನ್ನು ಪೂರ್ಣವಾಗಿ ಕೇಳೋಣ. ಸರಿ ರದವರಂ ಹೊಸದಾಗಿ ಏನಾದರೂ ಹೇಳುತ್ತಾರೆಯೆ ? ಸುಪ್ರೀಮ್ ಕೋರ್ಟ್ ರೂಲ್ಸ್‌ನ್ನು ಏನಾದರೂ ಹೇಳುತ್ತಾರೆಯೇ ಎನ್ನುವುದನ್ನು ಕೇಳೋಣ.

SRI A. LAKSHMI SAGAR.—I read from Practice and Procedure of Parliament

> "When the Speaker withholds his consent to the moving of an adjournment motion in his chamber, it is neither obligatory to read out the motion to the House nor to give the reasons for refusing the consent. After a member is informed of the Speaker's decision withholding his consent no question is permitted to be raised in the House either on the subject matter of the notice of the reasons for disallowance thereof. If however, a member would like to make a submission to the Speaker to reconsider his decision, he can do so either in person to the Speaker in his Chamber later during the day or by submitting a written representation to the Speaker in that behalf. In case the Speaker is satisfied on the submission of the member that there are adequate grounds to bring up the matter before the House, he would either mention it or permit the member to raise it on the following day, irrespective of the fact that the notice had been given on the previous day."

ಇದು ಎಲ್ಲಾ ದೃಷ್ಟಿಯಿಂದಲೂ ಕೂಡ ಸಂಪೂರ್ಣವಾಗಿ ವಿವರಣಾತ್ಮಕವಾಗಿ ಇರತಕ್ಕಂಥ ವಿಚಾರ. ಹೀಗಿದ್ದರೂ ಕೂಡ ಮಾನ್ಯ ಬಂಗಾರಪ್ಪನವರು ತಮ್ಮ ರೂಲಿಂಗನ್ನು ಪುನರ್ ವಿಮರ್ಶೆಮಾಡಿ ಎನ್ನುವ ವಾದದ ಮಾತನ್ನು ಸಭೆಯ ಮುಂದೆ ಹೇಳಿ ತೀರ್ಮಾನ ಮಾಡಿ ಎನ್ನುವ ವಾದವನ್ನು ತಮ್ಮವಖಂದೆ ಹೇಳುವುದಕ್ಕೆ ಹೊರಟಿದ್ದಾರೆ.

ಮೊದಲು ಇದನ್ನು ತೀರ್ಮಾನ ಮಾಡಿದ್ದೀರಿ ಮತ್ತು ಆ ತೀರ್ಮಾನವನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ ಎಂಬ ಮಾತನ್ನು ತಾವು ಪುನರುಚ್ಚಾರ ಮಾಡಿದ್ದೀರಿ. ಅಲ್ಲಿಗೆ ಈ ವಿಷಯದ ಮೇಲೆ ಮುಂದೆ ನಡೆಯತಕ್ಕ ಪ್ರಸ್ತಾಪಗಳೆಲ್ಲವೂ ಕೊನೆಗಾಣಬೇಕು. ಮುಂದೆ ಇದರ ಮೇಲೆ ಚರ್ಚೆ ಮಾಡುವ ಪ್ರಶ್ನೆ ಬರುವುದಿಲ್ಲ. ಎರಡನೇಯ ಭಾಗದಲ್ಲಿ ತಾವು ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಅವಕಾಶ ಇದೆ ಎಂದು ಇದರಲ್ಲಿ ವ್ಯಾಖ್ಯಾನ ಇರುವುದರಿಂದ ಪುನರ್ ಪ್ರಸ್ತಾಪ ಮಾಡುವದ್ಕಾಗಲಿ. ಪುನರ್ ಪರಿಶೀಲನೆ ಮಾಡುವದಕ್ಕಾಗಲಿ ಸಭೆಯ ಮುಂದೆ ಅವಕಾಶ ಇಲ್ಲ. ತಮ್ಮ ಛೇಂಬರ್‌ನಲ್ಲಿ ವಾಗ್ವಾದ ಮಾಡುವುದಕ್ಕೆ, ವಿಚಾರ ಮಾಡುವುದಕ್ಕೆ ಅವಕಾಶ ಉಂಟು. ಈ ಎರಡು ವಿಂಡಿತಗಳನ್ನು ಒಳಗೊಂಡು ತಾವು ಪೂರ್ಣವಾಗಿ ವಿಚಾರ ಮಾಡಿ ತೀರ್ಮಾನ ಕೊಟ್ಟಿದ್ದೀರಿ. ಆದ್ದರಿಂದ ಮಾನ್ಯ ಬಂಗಾರಪ್ಪನವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಈ ವಿಷಯವನ್ನು ಇಲ್ಲಿಗೆ ಬಿಡೋಣ, ತಮ್ಮ ತೀರ್ಪಿಗೆ ಮಾನ್ಯತೆ ಕೊಡತಕ್ಕದ್ದು ನಮ್ಮೆಲ್ಲರ ಕರ್ತವ್ಯವೆಂದು ಭಾವಿಸಿದ್ದೇವೆ. ತಮ್ಮನ್ನು ಅವರು ಮನ ಒಲಿಸಿ ತಮ್ಮ ಛೇಂಬರ್‌ನಲ್ಲಿ ತಮ್ಮ ತೀರ್ಮಾನವನ್ನು ಪುರನ್ ಪರಿಶೀಲನೆ ಮಾಡುವುದಕ್ಕೆ ಅವರು ತಮ್ಮ ತಿಳಿವಳಿಕೆಯಂತೆ ತನ್ನ ವಾದವನ್ನು ತಮ್ಮ ಮುಂದೆ ಇಟ್ಟಿದ್ದೇ ಆದರೆ ತಾವು ಅ ನ್ನು ಪುನರ್ ವಿಮರ್ಶೆ ಮಾಡಬಹುದು ಅದು ಇಲ್ಲಿಲ. ಮತ್ತು ಈಗ ಅಲ್ಲ. ಇಷ್ಟನ್ನು ನಾನು ಅವರಲ್ಲಿ ಮನವಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರದ ಬಗ್ಗೆ ಮುಂದೆ ಚರ್ಚೆ, ವಿವಾದ ಬೇಡವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ

ಅಧ್ಯಕ್ಷರು.— ನನಗೆ ಹೇಳಲಿಕ್ಕೆ.....

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.— ಅವರು ಓದಿದಂಥ ಪ್ಯಾರಾಗ್ರಾಫ್ ಅನ್ನು ಆಗಲೇ ತಾವು ಓದಿ ಹೇಳಿದಿರಿ. ಆಗಲೇ ನಮಗೆ ಅದು ಅರ್ಥವಾಗಿದೆ. ಇಲ್ಲವೆಂದು ಅಲ್ಲ. ಈ ವಿಷಯಕ್ಕೆ ಸಂಬ್ಧ ಸಂಬಂಧ ಇದೆ ಎಂಬುದನು ತಮಗೆ ಮನ ಒಲಿಸಿ ಕೊಡಲು ಅವಕಾಶ ಮಾಡಿಕೊಡಬೇಕಂ. ಇದರಲ್ಲಿ ಸೆಕ್ಷನ್ ೩ ಇದೆ, ಆಮೇಲೆ ಸೆಕ್ಷನ್ ೧೨ ಇದೆ ಇದು ಬಹಳ ಮಹತ್ವವಾದುದು. ಇದು ಇಡೀ ಸದನಕ್ಕೆ ಸಂಬಂಧಪಟ್ಟ ಮತ್ತು.....

ಅಧ್ಯಕ್ಷರು.— ಇದ್ದರೂ ಕೂಡ ಈಗ ರೂಲಿಂಗ್ ಕೊಟ್ಟಿದ್ದೇನೆ. ಪಾರ್ಲಿಮೆಂಟ್ ಪ್ರೊಸೀಜರ್ ಪ್ರಕಾರ ನನಗೆ ತಾವು ಇಲ್ಲಿ ಪುನರ್ ವಿಮರ್ಶೆ ಮಾಡಬೇಕೆಂದು ಹೇಳುವುದಕ್ಕೆ ಹಕ್ಕಿಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.— ತಪ್ಪಂಗೆ ಹಕ್ಕಿದೆ.

ಅಧ್ಯಕ್ಷರು — ಮಾನ್ಯ ವೆಂಕಟಲಿಯವರು, ಪಾಟೀಲರು, ಬಂಗಾರಪ್ಪನವರು, ಬಸವಲಿಂಗಪ್ಪನವರು, ನಾಗರತ್ನಮ್ಮನವರು ಮತ್ತು ನೀವು ಇಷ್ಟು ಜನ ಬನ್ನಿ ನನ್ನನ್ನು ಕನ್‌ವಿನ್ಸ್ ಮಾಡಿ. ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಇದನ್ನು ಬೇರೆ ಫಾರಂನಲ್ಲಿ ಚರ್ಚಿಸುವುದಕ್ಕೆ ಮುಂಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಅವರು ಕೂಡ ಇಲ್ಲೇ ಇದ್ದರೆ. ರೂಲ್ ೬೮ರ ಪ್ರಕಾರ ಈ ವಿಚಾರವನ್ನು ತೆಗೆದುಕೊಳ್ಳುತ್ತೇವೆಂದರೆ ಇದನ್ನು ಇನ್‌ಸಿಸ್ಟ್ ಮಾಡುವುದಿಲ್ಲ. ಒಟ್ಟಿನಲ್ಲಿ ನಮಗೆ ಅಡ್ಜರನ್‌ಮೆಂಟ್ ಮೋಷನ್‌ಬರಬೇಕು. ಈಗಲೇ ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳುತ್ತಿಲ್ಲ ಗಮನ ಸೆಳೆಯುವ ಸೂಚನೆ ಆದ ಮೇಲೆ ತೆಗೆದುಕೊಳ್ಳೋಣವೆಂದರೂ ಸಂತೋಷ. ಆದಕ್ಕೆ ಸಾಮ್ಯನೆ ವಾದ ವಿವಾದ ಮಾಡಿಕೊಂಡು ಸದನದ ಕಾಲವನ್ನು ಹರಣ ಮಾಡುವುದರಲ್ಲಿ ಪ್ರಯೋಜನವಿಲ್ಲ. ಅದಕ್ಕೋಸ್ಕರ ತಮ್ಮಲ್ಲಿ ಕಳಿಕಳಿಯಿಂದ ಕೇಳಿಕೊಳ್ಳುತ್ತೇನೆ. ಸೆಕ್ಷನ್ ೩, ೧೨ ಮತ್ತು ೧೬ರ ಮೇಲೆ ಮಾತನಾಡಿ ಕೆಲವು ನಿರ್ಣಯಗಳನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕಂ ಮತ್ತು ಕೆಲವು ತಿದ್ದುಪಡಿಗಳನ್ನು ಸಹ ತರಬೇಕಾಗಂತ್ತದೆ.

ಅಧ್ಯಕ್ಷರು.— ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತೆಗೆದುಕೊಳ್ಳಬೇಕೋ, ಗಮನ ಸೆಳೆಯುವ ಸೂಚನೆಯಾಗಿ ತೆಗೆದುಕೊಳ್ಳಬೇಕೊ ಅಥವಾ ರೂಲ್ ೬೮ರ ಪ್ರಕಾರ ತೆಗೆದುಕೊಳ್ಳಬೇಕೋ ಎಂಬುದನ್ನು ಛೇಂಬರ್‌ನಲ್ಲಿ ವಿಚಾರ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.— ಛೇಂಬರ್ ಪ್ರಶ್ನೆ ಅಲ್ಲ. ಸರ್ಕಾರದ ಪರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರವನ್ನು ಮೇಲ್ಮನೆಯಲ್ಲಿ ಚರ್ಚೆ ಮಾಡುವುದಕ್ಕೆ ಒಪ್ಪಿದ್ದಾರೆ ನೀವು ಅಥವಾ ನಿಮ್ಮ ಪರವಾಗಿ ಒಬ್ಬರು ಸಚಿವರು ಯಾವುದೋ ಒಂದು ರೂಲ್ ಪ್ರಕಾರ ಚರ್ಚೆ ಮಾಡುವುದಕ್ಕೆ ಒಪ್ಪಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.— ನಾನಾಗಲಿ, ನನ್ನ ಪರವಾಗಿ ಬೇರೆ ಯಾರೇ ಸಚಿವರಾಗಲಿ ಮೇಲ್ಮನೆಯಲ್ಲಿ ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಒಪ್ಪಿಲ್ಲ. ಆಲ್ಲಿಯೂ ಕೂಡ ಅಡ್ಜರ್ನ್‌ಮೆಂಟ್ ಮೋಷನ್ ಮುಖಾಂತರ ಈ ವಿಚಾರವನ್ನು ಎತ್ತಬೇಕೆಂದು ವಿರೋಧ ಪಕ್ಷದ ನಾಯಕರು ಮಂತ್ರಿತರ ಸದಸ್ಯರು ಹೇಳಿದರು. ಅದು ಕಾಯಿದೆ ಪ್ರಕಾರ, ರೂಲ್ಸ್ ಪ್ರಕಾರ ಮಾಡುವುದಕ್ಕೆ ಬರುವುದಿಲ್ಲ ವೆಂದು ನಾನು ಸೂಚಿಸಿದ್ದೇನೆ. ಅದನ್ನು ಆಲ್ಲಿಯ ಸಭಾಪತಿಯವರು ತಿರಸ್ಕಾರ ಮಾಡಿದ್ದಾರೆ ಮತ್ತು ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಅಂದರೆ ಆಲ್ಲಿಯ ವಿರೋಧ ಪಕ್ಷದ ನಾಯಕರು ಸಭಾಪತಿಯವರ ರೂಲಿಂಗನ್ನು ಒಪ್ಪಿದ್ದಾರೆ. ಇಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಈ ಮನೆಯ ರೂಲ್ ೬೨ ಏನು ಹೇಳುತ್ತದೆಂದರೆ.

Rule 62. No motion which seeks to raise discussion on a matter pending before any statutory tribunal or statutory authority performing any judicial or quasi-judicial functions or any commission or court of enquiry appointed to enquire into or investigate any matter shall ordinarily be permitted to be moved. ಆ ಪ್ರಕಾರ ನೀವು ನಿರ್ಣಯ ತೆಗೆದುಕೊಂಡಿದ್ದೀರಿ.

(ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖಾರ್ಗೆಯವರು ಮತ್ತು ಮೂಡಲಗಿರಿಯಪ್ಪನವರು ಏನೋ ಹೇಳಲು ಎದ್ದರು.)

ಶ್ರೀ ರಾಮಕೃಷ್ಣ ಹೆಗಡೆ.— ಪ್ರಾವಿಸೋ ಇದೆ. ಪ್ರಾವಿಸೊ ಓದುತ್ತೇನೆ.

"Provided that the Speaker may in his discretion allow such matter being raised in the House as is concerned with the procedure or subject or stage of enquiry if the Speaker is satisfied that it is not likely to prejudice the consideration of such matter by the statutory tribunal, statutory authority, commission or court of enquiry"

ಇದನ್ನು ನೀವು ಪರಾಮರ್ಶೆ ಮಾಡಿ ನಿರ್ಣಯ ತೆಗೆದುಕೊಂಡಿದ್ದೀರಿ.

SRI P. MUDALAGIRIYAPPA.—We are questioning the procedure.....

SRI RAMAKRISHNA HEGDE.—The hon. member cannot ask questions on your judgment.

ಅಧ್ಯಕ್ಷರು.— ಮಾನ್ಯ ಮೂಡಲಗಿರಿಯಪ್ಪನವರೇ ಅವರು ಹೇಳುವುದು ಕೇಳಿ.

ಶ್ರೀ ಪಿ. ಮೂಡಲಗಿರಿಯಪ್ಪ.— ಇದು ಬಹಳ ಮುಖ್ಯವಾದದ್ದು. ಇದನ್ನು ಚರ್ಚೆ ಮಾಡಲೇ ಬೇಕು. ಇದರಲ್ಲಿ ಸಂವಿಧಾನದ ಪ್ರಶ್ನೆ ಬಂದಿದೆ. The procedure adopted in appointing the Lokayuktha is against Article 21 of the Constitution and it is also not in fairsness and reasonableness. It is arbitratry.

ಅಧ್ಯಕ್ಷರಂ.— ಆ ಪ್ರಶ್ನೆ ಬರುವುದಿಲ್ಲ. ತಾವು ಕಂಳಿತಂಕೊಳ್ಳಿ ಹೇಳುತ್ತೇನೆ.

ಶ್ರೀ ಪಿ. ಮೂಡಲಗಿರಿಯಂಪ್ಪ.— ಆರ್ಟಿಕಲ್ ೨೧.....

SRI RAMAKRISHNA HEGDE.— If they have violated the procedure prescribed by this then you can question. ಯಾವ ಕಾಯಿದೆಯನ್ನು ಈ ಮನೆಯಲ್ಲಿ ನೀವೆಲ್ಲಾ ಸೇರಿ ಪಾಸ್ ಮಾಡಿದ್ದೀರೋ ಅದರ ಪ್ರಕಾರವೇ ಅವರ ನೇಮಕಾತಿಯಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಆದ್ದರಿಂದ ಇಲ್ಲಿ ಡಿಸ್‌ಕಸ್ ಮಾಡುವುದಕ್ಕೆ ಅಧಿಕಾರ ಇದೆ.

SRI S. BANGARAPPA.— If he violates.....

ಶ್ರೀ ರಾಮಂಕೃಷ್ಣ ಹೆಗಡೆ.— ಈ ಕಾಯಿದೆಗೆ ತಿದ್ದುಪಡಿ ತರುತ್ತೇವೆ. ಅದನ್ನು ತಂದಾಗ ಡಿಸ್‌ಕಸ್ ಮಾಡಿ.

ಶ್ರೀ ಎಸ್. ಬಂಗಾರಪ್ಪ — ಆಗ ಡಿಸ್‌ಕಸ್ ಮಾಡೋಣ. But if he himself violates all the procedure laid down by this House.

SRI RAMAKRISHNA HEGDE.— Who has violated ? ವಯಲೆಟ್ ಮಾಡಿದವರು ಯಾರು ?

SRI S. BANGARAPPA — This House has got full powers to discuss,

ಶ್ರೀ ರಾಮಕೃಷ್ಣ ಹೆಗಡೆ.— ಯಾರಂ ವಯಲೇಟ್ ಮಾಡಿದ್ದಾರೆ ?

ಶ್ರೀ ಎಸ್. ಬಂಗಾರಪ್ಪ.— ಅವರು.

ಶ್ರೀ ರಾಮಕೃಷ್ಣ ಹೆಗಡೆ.— ಅವರು ಎಂದರೆ ಯಾರು ?

SRI S. BANGARAPPA.— He means Lokayuktha Can you treat him as a sole Monarch ?

ಶ್ರೀ ರಾಮಕೃಷ್ಣ ಹೆಗಡೆ.— ಅವರಿಗೆ ಉರಿ ಹತ್ತಿಕೊಂಡಿದ್ದರೆ ನಾವೇನು ಮಾಡೋಣ.

ಶ್ರೀ ಎಸ್ ಬಂಗಾರಪ್ಪ — ನಿಮಗೆ ಉರಿ ಹತ್ತಿಕೊಂಡಿದೆ ನೀವು ದಾರಿತಪ್ಪಿ ಮಾತನಾಡುವುದನ್ನು ಬಿಡಬೇಕಂ. ಇದು ಒಳ್ಳೆಯದಲ್ಲ. ಏನು ಉರಿ ಹತ್ತಿದ್ದು ? ನಿಮಗೆ ಉರಿ ಬಿದ್ದಿದೆ.***

***

MR. SPEAKER.— Nothing will go on record,

ಲೋಕಾಯುಂಕ್ತದ ಬಗ್ಗೆ ಏನು ಹೇಳಿದರೂ ಅದನ್ನು ನಾನು ಅಲೋ ಮಾಡುವುದಿಲ್ಲ.

ಲೋಕಾಯುಂಕ್ತದ ಬಗ್ಗೆ ಯಾರು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಈಗ ಹೇಳಿದ್ದದು ಎಕ್ಸ್‌ಪಂಜ್ ಆಗಲಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಏನು ಉರಿ ಬಿದ್ದಿದೆ.....

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. Nothing will go on record.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಮೂಗಿನ ನೇರಕ್ಕೆ ಮಾತನಾಡುವುದಕ್ಕೆ ನಿಮಗೆ ಎರಡು ಕೋಡು ಬಂದಿದೆಯೆ ? ಸ್ಪೆಷಲ್ ಕೋಡು ಏನಾದರೂ ಇದೆಯೆ ನಿಮಗೆ?

---

*Not recorded as ordered by the Chair.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೆ, ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ನಾನು ಮಾನ್ಯ ಬೊಮ್ಮಾಯಿಯವರನ್ನು ಕರೆದಿದ್ದೇನೆ. ಅವರು ಏನು ಹೇಳುತ್ತಾರೋ ನೋಡೋಣ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರ ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ, —ಪಾಯಿಂಟ್ ಆಫ್ ಆರ್ಡರ್.....

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರು ಏನು ಹೇಳುತ್ತಾರೋ ಕೇಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ. — ಮೊದಲು ಏತಕ್ಕೆ ಉರಿ ಬಿದ್ದಿದೆ ಎಂಬುದನ್ನು ಹೇಳಬೇಕು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ನಾನು ಅವರಿಗೆ ಅಲೋ ಮಾಡಿದ್ದೇನೆ. ಅವರು ಮಾತನಾಡಲಿ.

ಶ್ರೀ ಎಸ್. ಬಂಗಾರಪ್ಪ.—ಏನು ಉರಿ ಬಿದ್ದಿದೆ ?

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರನ್ನು ಕರೆದಿದ್ದೇನೆ. ಅವರ ಪಾಯಿಂಟ್ ಆಫ್ ಆರ್ಡರನ್ನು ಹೇಳಲಿ ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ, —ನಾನು ಹೇಳತಕ್ಕದ್ದು ಏನೆಂದರೆ.....

ಶ್ರೀ ಸಿದ್ಧರಾಮಯ್ಯ.—ಉರಿ ಬಿದ್ದಿದೆ ಎಂದರೆ ಅದು ಅನ್ ಪಾರ್ಲಿಮೆಂಟರಿ ಪದವೇನು?

ಶ್ರೀ ಎಸ್. ಬಂಗಾರಪ್ಪ.—ಅನ್ ಪಾರ್ಲಿಮೆಂಟರಿ ಅಂತ ಹೇಳಲಿಲ್ಲ.....

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಕೇಳಿ. ಮುಂಬಯಿ ಕರ್ನಾಟಕದಲ್ಲಿ ಉರಿ ಬಿದ್ದಿದೆ ಅಂತ ಅಂದರೆ ಸಿಟ್ಟು ಬಂದಿದೆ ಎಂದು. ಮುಂಬಯಿ ಕರ್ನಾಟಕದಲ್ಲಿ ಅಂದರೆ ಕಾರವಾರ, ಬೆಳಗಾಂ, ಬಿಜಾಪುರ ಆ ಕಡೆ ''ಉರಿ'' ಅಂದರೆ ''ಸಿಟ್ಟು'' ಎಂದು ಅರ್ಥ.

ಶ್ರೀ ಎಸ್. ಬಂಗಾರಪ್ಪ,—ಹಾಗಾದರೆ ಅವರು ಬೆಳಗಾಂ, ಧಾರವಾಡದವರೆ?. ಅವರೂ ನಾವೂ ಒಂದೇ ಜಾಗದವರು. ಹಾಗಾದರೆ ನಾವೂ ಕೂಡ ಅದೇ ರೀತಿಯ ಪದಗಳನ್ನು ಉಚ್ಚಾರ ಮಾಡುತ್ತೇವೆ. ಉರಿ ಬಿದ್ದಿದೆ ಎಂದರೇನು ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ಪಾಯಿಂಟ್ ಆಫ್ ಆರ್ಡರ್ ಹೇಳುತ್ತಾರೆ. ನಿಮಗೆ ಸಿಟ್ಟು ಬೇಡ.

ಶ್ರೀ ಎಸ್ ಬಂಗಾರಪ್ಪ.—ನೀವು ಅಧ್ಯಕ್ಷರಾಗಿ ಈ ರೀತಿ ಮಾತನಾಡುತ್ತಾ ಕೂತರೆ ನಾವು ಅದನ್ನೆಲ್ಲಾ ಕೇಳಬೇಕೆ ?

ಅಧ್ಯಕ್ಷರು.—ನಾನು ಏನು ಹೇಳಿದೆ ? ಸಿಟ್ಟುಬೇಡ. ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ, —ಸಿಟ್ಟಿಲ್ಲ. ಅವರು ಬೆಂಕಿ ಹಚ್ಚುತಕ್ಕಂಥ ಮಾತನಾಡಲಿಕ್ಕೆ ನೀವು ಏತಕ್ಕೆ ಅವಕಾಶವನ್ನು ಕೊಡುತ್ತೀರಿ ?

ಅಧ್ಯಕ್ಷರು.—ಸಿಟ್ಟಿಗೆ ಏಳಬೇಡಿ ಅಂದರೆ ಉರಿ ಏಳಬೇಡಿ ಎಂದು. ಉರಿ ಏಳಬೇಡಿ ಎಂದರೆ ಸಿಟ್ಟಿಗೆ ಏಳಬೇಡಿ ಎಂದು ಅರ್ಥ.

ಶ್ರೀ ಎಸ್. ಬಂಗಾರಪ್ಪ.—ನೀವು ಏತಕ್ಕೆ ಅವರಿಗೆ ಅವಕಾಶ ಕೊಡುತ್ತೀರಿ ?

ಅಧ್ಯಕ್ಷರು.—ಮುಂಬೈ ಕರ್ನಾಟಕದ ಭಾಷೆ. ಅವರು ಕಾರವಾರ ಜಿಲ್ಲೆಯವರು.

ಶ್ರೀ ಎಸ್. ಬಂಗಾರಪ್ಪ.—ಅವರೂ, ನಾವೂ ಒಂದೇ ಭಾಗದವರು. ಮುಂಬೈ ಕರ್ನಾಟಕದವರಲ್ಲ ನೀವೂ ಕೂಡ ಅದನ್ನು ತಡೆದುಕೊಂಡಿರಬಾರದು. ಅದು ಒಳ್ಳೆಯದಲ್ಲ.

ಅಧ್ಯಕ್ಷರು.—ಸಮಾಧಾನ ಮಾಡಿಕೊಳ್ಳಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಬಂಗಾರಪ್ಪನವರು ಲೋಕಾಯುಕ್ತದ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ವ್ಯಕ್ತಮಾಡಿದರು. ನಮ್ಮ ನಿಯಮಾವಳಿಯ ಪ್ರಕಾರ ಜ್ಯುಡಿಷಿಯಲ್ ಬಾಡಿ ಕ್ವಾಸಿ ಜ್ಯುಡಿಷಿಯಲ್ ಬಾಡಿಗಳ ವಿಚಾರದಲ್ಲಿ ಚರ್ಚೆ ಮಾಡಬೇಕಾದರೆ ನಿಯಮಾವಳಿಯ ಪ್ರಕಾರ ನಾವು ಹೋಗಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅದು ಎರಡೂ ಅಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಜ್ಯುಡಿಷಿಯಲ್ ಬಾಡಿ. ಆದ್ದರಿಂದ ಅವರು ಹೇಳಿದಂಥ ಪದಗಳನ್ನು ಕಡತದಿಂದ ತೆಗೆಯಬಹಾಕಬೇಕು. ನೀವು ಲೋಕಾಯುಕ್ತದ ಬಗ್ಗೆ ಹೇಳಿದಂಥ ಮಾತನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ನಿಯಮಾವಳಿಯ ಪ್ರಕಾರ ಅವಕಾಶವಿಲ್ಲ. ಅವರ ಬಗ್ಗೆ ಹೇಳಿದಂಥ ಶಬ್ದಗಳು ಏನಿವೆ ಅವು ಕಡತದಲ್ಲಿರುವುದು ಒಳ್ಳೆಯದಲ್ಲ. ಆದ್ದರಿಂದ ಆ ಶಬ್ದಗಳನ್ನು ತೆಗೆದು ಹಾಕಬೇಕು.

ಅಧ್ಯಕ್ಷರು.—ಲೋಕಾಯುಕ್ತದ ಬಗ್ಗೆ ಆ ಕಡೆಯವರಾಗಲಿ, ಈ ಕಡೆಯವರಾಗಲಿ ಯಾರು ಏನು ಹೇಳಿದರೂ ಅದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ. ಐ ಆ್ಯಮ್ ಸಾರಿ, ನೋ ನೋ, ನೀವು ಮಾಡುತ್ತಿರುವುದು ಸರಿಯಲ್ಲ. Lokayuktha is your own creation. it is not a judicial body nor a quasi-judicial body. Who said it is a judicial body? ಅವರು ಹೇಳಿದ ತಕ್ಷಣ ನಾನು ಹೇಳಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ ಎಂದು ಹೇಳುವುದಾದರೆ ನಾವು ಈ ಸದನದಲ್ಲಿ ಏತಕ್ಕೆ ಇರಬೇಕು ? ಲೋಕಾಯುಕ್ತದ ಬಗ್ಗೆ ಚರ್ಚೆಮಾಡುವುದಕ್ಕೆ ಬರುವುದಿಲ್ಲ ಎಂದರೆ ಹೇಗೆ? ಹಲವಾರು ವಿಷಯಗಳಲ್ಲಿ ಇನ್ ವೆಸ್ಟಿಗೇಷನ್ ಮಾಡಬೇಕಾವದ್ದು ಇದೆ, ನಮ್ಮ ರಾಜ್ಯಸರ್ಕಾರ ಅದಕ್ಕಾಗಿ ಹಣವನ್ನು ಖರ್ಚು ಮಾಡುತ್ತಿದೆ.

(ಗೊಂದಲ)

ಅಧ್ಯಕ್ಷರು.—ಈಗ ಪಾಯಿಂಟ್ ಆಫ್ ಆರ್ಡರನ್ನು ಮಾನ್ಯ ವೇದಾಂತ ಹೆಬ್ಬಾಗಿಲುಗಳವರು ಎತ್ತಿದ್ದಾರೆ. ನಾನು ರೂಲಿಂಗ್ ಕೊಡುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಸುಮಾರು ೮-೧೦ ಲಕ್ಷ ರೂಪಾಯಿಗಳ ಹಣವನ್ನು ಈ ಬರಗಾಲ ಪರಿಸ್ಥಿತಿಯಲ್ಲಿ ಕೊಟ್ಟಿದ್ದಾರೆ, ನಾವು ಈ ವಿಚಾರವನ್ನು ಇಲ್ಲಿ ಚರ್ಚೆಮಾಡುವುದಕ್ಕೆ ಅವಕಾಶ ಇಲ್ಲವೆ?

ಅಧ್ಯಕ್ಷರು.—ನಾನು ಈಗ ರೂಲಿಂಗ್ ಕೊಟ್ಟಮೇಲೆ ಮತ್ತೆ ಈವಿಚಾರದಲ್ಲಿ ನೀವು ಏನೆಲ್ಲಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. It should not go to the record. ನಾನು ಚರ್ಚೆಗೆ ಅವಕಾಶವನ್ನೇ ಕೊಟ್ಟಿಲ್ಲ. ಅಂದಮೇಲೆ ಚರ್ಚೆಯನ್ನು ಏತಕ್ಕೆ ಮಾಡಬೇಕು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲೋಕಾಯುಕ್ತವನ್ನು ಈ ಲೆಜಿಸ್ಲೇಚರ್ ಕ್ರಿಯೇಟ್ ಮಾಡಿದ್ದುದು.

ಅಧ್ಯಕ್ಷರು.—ನಾನು ಚರ್ಚೆಗೆ ಅವಕಾಶವನ್ನು ಕೊಟ್ಟಿಲ್ಲ. ಮಾನ್ಯ ಪೊಯ್ಲಿಯವರೆ ನಾನು ನಿಮಗೆ ಚರ್ಚೆಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಇದರ ಬಗ್ಗೆ ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು.—ಇಲ್ಲ. ನಾನು ಇದರ ಬಗ್ಗೆ ಅವಕಾಶವನ್ನು ಕೊಡುವುದಿಲ್ಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.–ಇದರ ಮೇಲೆಯೇ ನಾವು ಚರ್ಚೆ ಮಾಡುವಾಗ ನೀವು ಏತಕ್ಕೆ ಅವಕಾಶವನ್ನು ಮಾಡಿಕೊಡುವುದಿಲ್ಲ ?

ಅಧ್ಯಕ್ಷರು.–ಲೋಕಾಯುಕ್ತದ ಮೇಲೆ ಅಥವಾ ಅವರ ನಡವಳಿಕೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಅವಕಾಶವನ್ನು ಕೊಟ್ಟಿಲ್ಲ. ಆದ್ದರಿಂದ ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

12-30 P.M.

SRI RAMAKRISHNA HEGDE.--According to Lokayuktha Act Section-11 sub-section (3)any proceedings before the Lokayuktha or upa-Lokayuktha shall be deemed to be a judicial proceedings within the meaning of Section 193 of Indian Penal Code. ಇನ್ನೇನು ಆಗಬೇಕು? Chief Minister is the appointing authority ಎಂದು ಅವರು ಹೇಳಿದರು. ಅದು ಸತ್ಯಕ್ಕೆ ಬಹಳ ದೂರವಾದುದು. ನಾನ್ಯಮುಖ್ಯಮಂತ್ರಿಗಳ ನೇಮಕಾತಿ ಮಾಡುವ ಅಧಿಕಾರ ಇರುವುದು ರಾಜ್ಯಪಾಲರ ಹತ್ತಿರ. Chief Minister is consulted. in that sense if you call him an appointing authority, then Chief Minister is also appointing authority so far asHigh Court judges are concerned ಹೈಕೋರ್ಟಿನ ನ್ಯಾಯಾಧೀಶರ ಹೆಸರು ಹೋಗಬೇಕಾಗುತ್ತದೆ. ಈ ಬಗ್ಗೆ ಮುಖ್ಯ ನ್ಯಾಯಾಧೀಶರ ಮತ್ತು ರಾಜ್ಯಪಾಲರ ಜೊತೆ ಸಮಾಲೋಚನೆ ಮಾಡಿ ನಾನು ಹೆಸರನ್ನು ಕಳುಹಿಸಬೇಕಾಗುತ್ತದೆ. ಹಾಗಾದರೆ ಹೈಕೋರ್ಟಿನ ಎಲ್ಲಾ ನ್ಯಾಯಾಧೀಶರೂ ನಮ್ಮ ಕೈಯಲ್ಲಿ ಇರುವ ಹಾಗೆ ಆಗುತ್ತದೆಯೇ?ಅದೇ ರೀತಿ ಸುಪ್ರೀಮ್ ಕೋರ್ಟಿನ ನ್ಯಾಯಾಧೀಶರ ನೇಮಕವಾಗಬೇಕಾಗುತ್ತದೆ. ಆ ದೃಷ್ಟಿಯಿಂದ ಏನಾದರೂ ಎಲ್ಲಾ ಸುಪ್ರೀಮ್ ಕೋರ್ಟಿನ ನ್ಯಾಯಾಧೀಶರೂ ಕೇಂದ್ರ ಸರ್ಕಾರದ ಕೆಳಗೆ ಕೆಲಸ ಮಾಡುತ್ತಾರೆಂದು ಹೇಳಿದರೆ ಇದಕ್ಕಿಂತಲೂ ಅವಿವೇಕದ ಕೆಲಸ ಬೇರೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೈಕೋರ್ಟಿನ ಹಾಗೂ ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ನೇಮಕ ಸಂವಿಧಾನದ ಪ್ರಕಾರ ಆಗುತ್ತದೆ. ಲೋಕಾಯುಕ್ತ ಪ್ರಕಾರ ಹೈಕೋರ್ಟಿನ ಹಾಗೂ ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ನೇಮಕ ಮಾಡುವುದಕ್ಕಾಗುತ್ತದೆಯೇ ? That is the creation under Constitution. But this is your own creation in creation of this House. This House has got every right to discuss. Why you want to tie our hands? We have laid down this Act. ಯಾವ ಕಾನೂನನ್ನು ಈ ಸದನದಲ್ಲಿ ಮಾತಾಡಿರುತ್ತೇವೆಯೋ ಅದರಲ್ಲಿ ಅಡಚಣೆ ಇದ್ದರೆ ಅದನ್ನು ನಿವಾರಣೆ ಮಾಡುವುದಕ್ಕೆ ಅಧಿಕಾರ ಇಲ್ಲ ಎಂದರೆ ಹೇಗೆ ?

ಶ್ರೀ ಎಂ. ರಘುಪತಿ.— ನನ್ನದೊಂದು ಕ್ರಿಯಾಲೋಪ ಇದೆ.

SRI M. MALLIKARJUNA KHARGE.—We have laid down this act. ಇದರಲ್ಲಿ ಡಿಫೆಕ್ಟ್ ಇದ್ದಾಗ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದರೆ ಹೇಗೆ? ಇಲ್ಲಿ ಇನ್ನೊಂದು ತಮಾಷೆ ಇದೆ. ಅವರು ಮಾಡಿದ ರೆಕಮೆಂಡೇಷನ್ ಇವರಲ್ಲಿಗೇ ಬರಬೇಕು. They can accept it or reject it. Then how are you going to discuss according to this Act.

ಶ್ರೀ ಎಂ. ರಘುಪತಿ.— ಈ ಸದನದಲ್ಲೇ ಚರ್ಚೆಯಾಗಿ ಪಾಸ್ ಆಗಿರುವ ಮಸೂದೆ. ಅದು ಮಸೂದೆ ಮೇಲೆ ಚರ್ಚೆ ಬಂದಾಗ, ತಿದ್ದುಪಡಿ ತಂದು ಚರ್ಚೆ ಮಾಡುವ ಸಂದರ್ಭದಲ್ಲಿ ಚರ್ಚೆ ಮಾಡೋಣ. ಆದರೆ ಈಗ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ, ನಿಲುವಳಿ ಸೂಚನೆ ಮೇಲೆ ಚರ್ಚೆ

ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ರಿಜೆಕ್ಟ್ ಮಾಡಿ ಮುಂದೆ ಬೇರೆ ವಿಷಯಂಗಳು ಚರ್ಚೆ ಯಾಗುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು — ಮಾನ್ಯ ವೇದಾಂತ ಹೆಮ್ಮಿಗೆಯವರು, ಮಾನ್ಯ ಕಾನೂನು ಮಂತ್ರಿಯವರು ಹಾಗೂ ಮಾನ್ಯ ರಘುಪತಿಯವರು ಎತ್ತಿರುವ ಕ್ರಿಯಾಲೋಪಗಳ ಬಗ್ಗೆ ನಾನು ರೂಲಿಂಗ್ ಕೊಡ ಬೇಕಾಗಿದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.— ಹೈಕೋರ್ಟಿನ ಹಾಗೂ ಸುಪ್ರೀಂ ಕೋರ್ಟಿನ ನ್ಯಾಯಾ ಧೀಶರ ವಿಷಯ ಬೇರೆ. ಲೋಕಾಯುಕ್ತರು ಫ್ಯಾಕ್ಟ್ ಫೈಂಡಿಂಗ್ ಕೆಲಸ ಮಾಡುತ್ತಾರೆ. ಅವರು ಏನು ವರದಿ ಕೊಡುತ್ತಾರೆ ಅದು ಕ್ಯಾಬಿನೆಟ್ ಮುಂದೆ ಬರುತ್ತದೆ. ಇಲ್ಲಿ ಅವರ ಮರ್ಜಿ ಇದೆ. ಇವರ ಮರ್ಜಿ ಇರುವುದರಿಂದ ಇದರ ಬಗ್ಗೆ ನಾವು ಚರ್ಚೆ ಮಾಡದೇ ಇದ್ದರೆ ಬೇರೆ ಯಾರು ಚರ್ಚೆ ಮಾಡುತ್ತಾರೆ? ಈಗತಾನೇ ಮಾನ್ಯ ಲಕ್ಷ್ಮೀಸಾಗರ್ ಅವರು ಬೇಕಾದಷ್ಟು ರೂಲಿಂಗ್‌ಗಳನ್ನು ಓದಿದರು. ನಾವೇನು ಇಲ್ಲಿ ಇವತ್ತು ಹೊಸದಾಗಿ ಬಂದಿದ್ದೇವೆಯೇ? ತಾವು ಎಷ್ಟೋ ಸಾರಿ ಕೊಟ್ಟ ರೂಲಿಂಗ್ಸ್ ಬಗ್ಗೆ ಮತ್ತೆ ವಿಮರ್ಶೆ ಮಾಡಿ ಎಂದು ನಾವು ಎಷ್ಟೋ ಸಾರಿ ಕೇಳಿಕೊಂಡಾಗ ತಾವು ಪುನರ್ ವಿಮರ್ಶೆ ಮಾಡಿ ನಮಗೆ ಮಾತನಾಡಲು ಅವಕಾಶ ಕೊಟ್ಟ ಎಷ್ಟೋ ನಿದರ್ಶನಗಳು ಇವೆ. ಇವತ್ತು ಏನು ತಪ್ಪು ಆಗಿದೆ ಅದನ್ನು ಸರಿ ಮಾಡುವುದು ಬೇಡವೇ? ದಯಮಾಡಿ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಈಗ ಈ ಆಕ್ಟ್‌ನಲ್ಲಿ ಏನಾದರೂ ಕೊರತೆ ಇದ್ದರೆ ಅದನ್ನು ತಿದ್ದುಪಡಿ ಮಾಡಲಿಕ್ಕೆ ಈ ಮನೆಗೆ ಅಧಿಕಾರವಿದೆ. ಒಂದು ತಿದ್ದುಪಡಿ ಪುಸ್ತಕವನ್ನು ನಾನೇ ತರಬೇಕೆಂದು ಇದ್ದೇನೆ. ಮಾನ್ಯ ಸದಸ್ಯರು ಬಯಸಿದರೆ ಅವರು ಕೂಡ ತಿದ್ದುಪಡಿಯನ್ನು ತರಬಹುದು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.— ನಾವು ತರುವ ತಿದ್ದುಪಡಿ ಪಾಸ್ ಆಗುತ್ತದೆಯೆ?

ಶ್ರೀ ರಾಮಕೃಷ್ಣ ಹೆಗಡೆ.— ಅನೇಕ ತಿದ್ದುಪಡಿಗಳನ್ನು ವಿರೋಧಪಕ್ಷದವರು ತಂದರೂ ಕೂಡ ಆ ತಿದ್ದುಪಡಿಗಳಲ್ಲಿ ಅರ್ಥವಿದ್ದರೆ ಅದನ್ನು ನಾವು ಒಪ್ಪಿಕೊಂಡಿದ್ದೇವೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.— ಹಾಗಾದರೆ ನಾವು ತರುವ ತಿದ್ದುಪಡಿಗಳಿಗೆ ಅರ್ಥ ಇಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.— ಇದೇ ಅಧಿವೇಶನದಲ್ಲಾಗಲಿ, ಸಾಧ್ಯವಾಗದಿದ್ದರೆ ನಂತರ ಬರತಕ್ಕ ಅಧಿವೇಶನದಲ್ಲಿ ಲೋಕಾಯುಕ್ತ ಆಕ್ಟ್‌ಗೆ ನಾವು ತಿದ್ದುಪಡಿಯನ್ನು ತರಬೇಕೆನ್ನುವ ಉದ್ದೇಶ ಇದೆ. ಆದು ಯಾವ ತರಹ ತಿದ್ದುಪಡಿ ಅಂದರೆ ಮೊನ್ನೆ ಕೇರಳದಲ್ಲಿ ಇಂಥದ್ದೆ ಒಂದು ಆಕ್ಟ್ ಮಾಡಿದ್ದಾರೆ. ಕೇರಳದಲ್ಲಿ ಈ ಪುಸ್ತಕವನ್ನು ತಯಾರು ಮಾಡುವಾಗ ಯಾವ್ಯಾವ ರಾಜ್ಯಗಳಲ್ಲಿ ಲೋಕಾಯುಕ್ತ ಪದ್ಧತಿ ಇದೆ ಲೋಕಾಯುಕ್ತ ಸಂಸ್ಥೆಯನ್ನು ಸ್ಥಾಪನೆ ಮಾಡಿದ್ದಾರೆ, ಆ ಕಾಯಿದೆಯನ್ನು ಪಾಸ್ ಮಾಡಿದ್ದಾರೆ ಅವುಗಳೆಲ್ಲವನ್ನು ತರಿಸಿಕೊಂಡು ನೋಡಿದ್ದಾರೆ. ಅವರ ಅಭಿಪ್ರಾಯದಲ್ಲಿ ಬಾಕಿ ಎಲ್ಲಾ ರಾಜ್ಯಗಳ ಪುಸ್ತಕದಿಂತ ಕರ್ನಾಟಕದ ಪುಸ್ತಕ ಉತ್ತಮವೆಂದು ಅವರೇ ಅಭಿಪ್ರಾಯ ಪಟ್ಟಿದ್ದಾರೆ. ಆದರ ಹೊರತಾಗಿ ಒಂದೆರಡು ಪುಸ್ತಕ ವಿಚಾರ ಗಳನ್ನು ಆದರಲ್ಲಿ ಸೇರಿಸಿದ್ದಾರೆ. ಅವರ ಕಾಯಿದೆಯಲ್ಲಿರುವುದನ್ನು ನಮ್ಮಲ್ಲೂ ಸೇರಿಸಬೇಕೆನ್ನುವುದು ನಮ್ಮ ಉದ್ದೇಶ. ನಮ್ಮ ಉದ್ದೇಶ ಯಾವುದಾದರೂ ಒಬ್ಬ ವ್ಯಕ್ತಿಯ ಮೇಲೆ ಏನಾವಶ್ಯಕವಾಗಿ ಅವರ ಮೇಲೆ ಎನ್‌ಕ್ವೈರಿ ಮಾಡುವುದಕ್ಕಾಗಲೀ ಅಲ್ಲ, ತೊಂದರೆ ಕೊಡುವುದಕ್ಕಾಗಲೀ ಅಲ್ಲ. ಭ್ರಷ್ಟಾಚಾರದ ಆರೋಪ ಯಾರದೇ ವಿರುದ್ಧ ಬರಲಿ, ಮಾನ್ಯ ಸದಸ್ಯರ ವಿರುದ್ಧ ಬರಲಿ, ಮಂತ್ರಿಗಳ ವಿರುದ್ಧ ಬರಲಿ, ಮುಂಖ್ಯ ಮಂತ್ರಿಗಳ ವಿರುದ್ಧ ಬರಲಿ ಆ ಭ್ರಷ್ಟಾಚಾರದ ಆರೋಪದ ಮೇಲೆ ತನಿಖೆ ಮಾಡಿಸತಕ್ಕದ್ದು. ಶ್ರೀಮತಿ ನಾಗರತ್ನಮ್ಮನವರು ಹೇಳಿದರು, ಆವರು ರಿಪೋರ್ಟ್ ಕೊಟ್ಟರೆ ಮುಂದೆ ಏನಾಗಬೇಕೆಂದು, ರಿಪೋರ್ಟ್ ಕೊಟ್ಟರೆ, ಜುಡೀಷಿಯಲ್ ಕಮಿಷನ್‌ಗಳ ರಿಪೋರ್ಟ್ ಏನಾಗಿದೆ ಎಂಬುದು ನಿಮಗೆ ಗೊತ್ತು. ಎನ್‌ಜೆಇಪಿ. ಬಗ್ಗೆ ಒಂದು ಆರೋಪವಿದೆ, ಅದರ ಬಗ್ಗೆ ಒಂದೆರಡು ಸಲ ಉತ್ತರ ಕೊಟ್ಟಾಯಿತು. ಮಾನ್ಯ ಕೈಗಾರಿಕಾ ಮಂತ್ರಿಗಳು ಅತ್ಯಂತ ವಿವರವಾಗಿ ಮೇಲ್ಮನೆಯಲ್ಲಿ ಉತ್ತರ ಕೊಟ್ಟರು.

ಶ್ರೀ ಸಿ.ಪಿ. ಮೂಡಲಗಿರಿಯಪ್ಪ.— ನಾನು ಕ್ರಿಯಾಲೋಪ ಎತ್ತುತ್ತೇನೆ.

(ಗೊಂದಲ)

ಅಧ್ಯಕ್ಷರು.— ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕರೆದಿದ್ದೇನೆ, ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, ಅದಕ್ಕೆ ಅವರು ಉತ್ತರ ಕೊಡುತ್ತಿದ್ದಾರೆ ಅವರು ಮಾತನಾಡಲಿ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ.— ಅಧ್ಯಕ್ಷರೇ.....

ಅಧ್ಯಕ್ಷರು.— ಮಾನ್ಯ ಮುಖ್ಯಮಂತ್ರಿಗಳು ಇನ್ನು ತಮ್ಮ ಮಾತುಗಳನ್ನು ಮುಗಿಸಿಲ್ಲ.

ಶ್ರೀ ಸಿ.ಪಿ. ಮೂಡಲಗಿರಿಯಪ್ಪ.— ಈಗ ಮುಖ್ಯಮಂತ್ರಿಗಳು ನಾವು ನಿಲುವಳಿ ಸೂಚನೆಯನ್ನು ತರುವುದಕ್ಕೆ ಮುಂಚೆ ನಮ್ಮ ಮೈಂಡನ್ನು ತಿಳಿದುಕೊಂಡು ಉತ್ತರ ಕೊಡುವುದಕ್ಕೆ ಹೊರಟಿದ್ದಾರೆ. ಅದು ಚರ್ಚೆಯಾಗಬೇಕು, ಚರ್ಚೆಯಾಗುವುದಕ್ಕೆ ಮುಂಚೆ ಅವರು ಉತ್ತರ ಕೊಡುವುದಕ್ಕೆ ಹಕ್ಕೇ ಇಲ್ಲ.

ಅಧ್ಯಕ್ಷರು.— ತಾವು ಕುಳಿತುಕೊಳ್ಳಿ, ಶ್ರೀಮತಿ ನಾಗರತ್ನಮ್ಮನವರಿಗೆ ಅವಕಾಶ ಕೊಟ್ಟಿದ್ದೇನೆ, ಅವರು ಹೇಳಿದ್ದಾರೆ. ಅದಕ್ಕೆ ಉತ್ತರ ಹೇಳಂತಿದ್ದಾರೆ. ಇಲ್ಲಿ ಕ್ರಿಯಾಲೋಪದ ಪ್ರಶ್ನೆ ಬರುವುದಿಲ್ಲ. ವಿರೋಧಪಕ್ಷದ ನಾಯಕರಾದ ಶ್ರೀಮತಿ ನಾಗರತ್ನಮ್ಮನವರು ಕೆಲವೊಂದು ಮಾತುಗಳನ್ನು ಇಟ್ಟಿದ್ದಾರೆ. ಅದಕ್ಕೆ ಅವರು ಉತ್ತರ ಹೇಳುತ್ತಾರೆ. That matter has been closed already ಎಂದು ಹೇಳಿ ಮುಂದೆ ಹೋಗಬೇಕಾಗುತ್ತದೆ. ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಅದಕ್ಕೆ ಅವರು ಉತ್ತರ ಹೇಳಲಿಕ್ಕೆ ಅವಕಾಶ ಕೊಟ್ಟಿದ್ದೇನೆ, ನನಗೆ ಆ ಡಿಸ್ಕ್ರಿಷನರಿ ಪವರ್ ಇದೆ, ಶ್ರೀಮತಿ ನಾಗರತ್ನಮ್ಮನವರಿಗೂ ಅವಕಾಶ ಕೊಟ್ಟಿದ್ದೇನೆ, ಸಭಾನಾಯಕರಿಗೂ ಅವಕಾಶ ಕೊಟ್ಟಿದ್ದೇನೆ.

ಶ್ರೀ ರಾವಂಕೃಷ್ಣ ಹೆಗಡೆ.— ವಿರೋಧಪಕ್ಷದ ನಾಯಕರು ರಿಪೋರ್ಟ್ ಕೊಟ್ಟರೆ ಏನಾಗುತ್ತದೆನ್ನುವ ವಿಚಾರ ಹೇಳಿದರು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸದಸ್ಯರು ಕ್ರಿಯಾಲೋಪ ಎತ್ತಿದ್ದಾರೆ. ನೀವು ಅದಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ನೀವು ಅವಕಾಶವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು.— ಕ್ರಿಯಾಲೋಪ ಎತ್ತಲಿಕ್ಕೆ ಅವಕಾಶ ಕೊಟ್ಟರೆ ಈ ಕಡೆಯವರೂ ಎತ್ತುತ್ತಾರೆ.

ಶ್ರೀ ಎಸ್. ಬಂಗಾರಪ್ಪ.— ಇಲ್ಲಿ ನಾಗರತ್ನಮ್ಮನವರ ಪ್ರಶ್ನೆಯಲ್ಲ. With your permission she spoke.

ಅಧ್ಯಕ್ಷರು.— ಅವಕಾಶ ಕೊಟ್ಟಿದ್ದೇನೆ, ವಿರೋಧಪಕ್ಷದ ನಾಯಕರಿಗೂ ಅವಕಾಶ ಕೊಟ್ಟಿದ್ದೇನೆ. ಸಭಾನಾಯಕರಿಗೂ ಅವಕಾಶ ಕೊಟ್ಟಿದ್ದೇನೆ, ಅದು ನನ್ನ ಕರ್ತವ್ಯ.

ಶ್ರೀ ಎಸ್. ಬಂಗಾರಪ್ಪ.— ಹಾಗಾದರೆ ಪಾಯಿಂಟ್ ಆಫ್ ಆರ್ಡರ್ ಏನಾಗಬೇಕು?

ಅಧ್ಯಕ್ಷರು.— ನಾನು ಹೇಳುತ್ತೇನೆ, ತಾವು ಕುಳಿತುಕೊಳ್ಳಿ.

ಶ್ರೀ ರಾವಂಕೃಷ್ಣ ಹೆಗಡೆ.— ಈಗ ಈ ಆಕ್ಟ್ ಪ್ರಕಾರ ಮಾನ್ಯ ವಿರೋಧ ಪಕ್ಷದ ನಾಯಕರು ದಯವಿಟ್ಟು ಗವರ್ನ ಕೊಡಬೇಕು. ಈ ನಮ್ಮ ಕಾಯಿದೆ ಪ್ರಕಾರ ಏನು ರಿಪೋರ್ಟನ್ನು ಮಾಡುತ್ತಾರೆ ಅದನ್ನು ಕಾಂಪಿಟೇಷನ್ ಅಥಾರಿಟಿಗೆ ಕಳಿಸುತ್ತಾರೆ. ಇಲ್ಲಿ ಕಾಂಪಿಟೆಂಟ್ ಅಥಾರಿಟಿ ಎಂದರೆ ಈ ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರು ಆ ರೀಪೋರ್ಟನ್ನು ಈ ಮನೆಯ ಟೇಬಲ್ ಮೇಲೆ ಇರುವಂಥ ವ್ಯವಸ್ಥೆ ಮಾಡುತ್ತೇವೆ. ಇದು ಕಂಪಲ್ಸರಿ ಅಂದರೆ ಯಾವುದೇ ವಿರುದ್ಧವಾದ ತೀರ್ಪು ಇದ್ದರೆ ರಿಪೋರ್ಟ್ ಇದ್ದರೆ ಅದು ಈ ಮನೆಯ ಮುಂದೆ ಬರುತ್ತದೆ. ಈಗ ನನ್ನದೇ ಉದಾಹರಣೆಯನ್ನು ಹೇಳುತ್ತೇನೆ. ಎನ್.ಜಿ.ಇ.ಎಫ್, ವಿಷಯದಲ್ಲಿ ಇಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಗಳು ವಿವರಣೆ ಕೊಟ್ಟಾಗ ಅದರಿಂದ ಮಾನ್ಯ ಸದಸ್ಯರಿಗೆ ತೃಪ್ತಿ ಆಗಲಿಲ್ಲವೆಂದು ಆಯಿತು, ಪತ್ರಿಕೆಗಳಲ್ಲೂ ಈ ವಿಷಯ ಬಂತು. ಆಗ ನಾನೇ ಇದನ್ನು ದಯವಿಟ್ಟು ತನಿಖೆ ಮಾಡಿ ಎಂದು ಹೇಳಿ ಸರ್ಕಾರದ ವತಿಯಿಂದ ಕಳಿಸಿಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅದನ್ನು ಬೇಕಾದರೆ ಚರ್ಚೆ ಮಾಡೋಣ, ಇವರು ಜ್ಞಾನ ತನ್ನದಿಂದ ಏನು ಮಾಡುತ್ತಾರೆ ಎಂದರೆ.....

ಅಧ್ಯಕ್ಷರು.— ಶ್ರೀ ಖರ್ಗೆಯವರೇ, ಇದು ಜಾಣತನದ ಪ್ರಶ್ನೆ ಅಲ್ಲ,

(ಗೊಂದಲ)

SRI M. MALLIKARJUNA KHARGE.— You please decide whether you are going to allow this discussion.

MR. SPEAKER.— No discussion because.....

ಶ್ರೀ ರಾಮಕೃಷ್ಣ ಹೆಗಡೆ.— ನಾನು ಹೇಳುತ್ತೇನೆ. ಏನಾದರೂ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮೊದಲು ಈ ವಿಷಯವನ್ನು ಇಲ್ಲಿ ಸೆಕ್ಷನ್ ೧೩ಎ ಪ್ರಕಾರ ತಂದಿದ್ದೇವೆ. ಸೆಕ್ಷನ್ ೧೬ರ ಪ್ರಕಾರ ಚರ್ಚೆ ಮಾಡೋಣ.

ಶ್ರೀ ರಾಮಕೃಷ್ಣ ಹೆಗಡೆ.— ನಾನು ಉದಾಹರಣೆಯನ್ನು ಹೇಳಿದೆ. ನಾನಾಗಿಯೇ ಅವರಿಗೆ ಎನ್‌ಕ್ವೈರಿ ಮಾಡುವುದಕ್ಕೆ ಹೇಳಿದ್ದೇನೆ. ಇದರಲ್ಲಿ ಬೇರೆ ಬೇರೆಯ ಅಭಿಪ್ರಾಯ ರಿಪೋರ್ಟ್ ಬಂದಿದ್ದರೆ ಇರುವಂಥ ಆಪಾದನೆಯಲ್ಲಿ ಸತ್ಯಾಂಶ ಇದ್ದರೆ ಅದು ಇಲ್ಲಿ ಬರುತ್ತದೆ. ಅದು ಬರುವುದಕ್ಕೆ ಮೊದಲು ನಾನೇ ರಾಜೀನಾಮೆ ಕೊಡುತ್ತೇನೆ. ನಿಮ್ಮ ಹಾಗೆ ಕಾಯುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏನು ಕೊಡುತ್ತೇನೆ ಎಂದು ಹೇಳಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಉದಾಹರಣೆಗೆ ಹೇಳಿದೆ. ನೀವು ಮುಖ್ಯಮಂತ್ರಿ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಹೇಳುತ್ತೀರಿ. ನಿಮ್ಮ ಕೈಯಲ್ಲಿದೆ, ನೀವು ಹೇಳಬಹುದು ಎಂದು ಹೇಳುತ್ತೀರಿ. ಅದಂ ಸರಿಯಿಲ್ಲವೆಂದಂ, ಇದನ್ನು ಉದಾಹರಣೆ ಕೊಟ್ಟು ಹೇಳಿದೆ. ಅದು ಈ ಮನೆಯ ಮುಂದೆ ಬರುತ್ತದೆ ಮತ್ತು ಆಗ ಚರ್ಚೆ ಮಾಡೋಣ. ಯಾರ ಮೇಲಾದರೂ ಆರೋಪ ಸಾಬೀತಾದರೆ ಯಾವ ಕ್ರಮಂ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಈ ಕಡೆಗೆ ಸೆಳೆಯುತ್ತೇನೆ. Section 3 Sub-clause 2(a) of Lokayuktha Act reads thus.—

> "A person to be appointed as the Lokayuktha shall be a person who has held the Office of the Judge of the supreme Court or that of the Chief Justice of the High Court and shall be appointed on the advice tendered by the Chief Minister in consultation with the Chief Justice of the High Court, Chairman Karnataka Legislative Council, Speaker, Karnatake Legislative Assembly, Leader of the Opposition, Karnataka Legislative Council and the Leader of the Opposition Karnataka Legislative Assembly."

ಅಂದರೆ ಇವರ ಅಡ್ವೈಸ್ ಮೇಲೆ ಯಾವುದೇ ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತ ವಾಗಲೀ ಅಪಾಯಿಂಟ್ ಮಾಡತಕ್ಕದ್ದು ಎನ್ನುತಕ್ಕದ್ದು ಇದೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನದಂ ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ನಾನು ನಿಮಗೂ ಅವಕಾಶ ಕೊಟ್ಟಿದ್ದೇನೆ, ಮಾನ್ಯ ಮುಖ್ಯ ಮಂತ್ರಿಗಳಿಗೂ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಕಡೆಯ ಸದಸ್ಯರೊಬ್ಬರಂ ಆಗಿನಿಂದ ಪಾಯಿಂಟ್ ಆಫ್ ಆರ್ಡರ್ ಕೇಳುತ್ತಿದ್ದಾರೆ. ಮೊದಲು ಅವರಿಗೆ ಅವಕಾಶ ಕೊಡಿ, ಈ ಕಡೆಯವರಿ

ಪಾಯಿಂಟ್ ಆಫ್ ಆರ್ಡರ್ ಎಂದರೆ ತಾವು ಏಕೆ ಅಡ್ಮಿಟ್ ಮಾಡುವುದಿಲ್ಲ ? ಇದು ಸರಿಯಲ್ಲ. This is not correct.

ಅಧ್ಯಕ್ಷರು.—ನಾನು ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳತಕ್ಕದ್ದು ಏನೆಂದರೆ.....

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ...

ಅಧ್ಯಕ್ಷರು.—ಅವರು ಕ್ಲಾರಿಫಿಕೇಶನ್ ಕೊಡುತ್ತಿದ್ದಾರೆ. ಅದು ಏನು ಎಂದು ಕೇಳೋಣ.

ಶ್ರೀ ಎಂ. ಎಸ್. ಕೃಷ್ಣನ್.—ಒಟ್ಟು ಎಷ್ಟು ಪಾಯಿಂಟ್ ಆಫ್ ಆರ್ಡರ್‌ಗಳು ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳತಕ್ಕದ್ದು ಏನೆಂದರೆ ಮಾನ್ಯ ಖಿರ್ಗಿಯವರಿ ಸೆಕ್ಷನ್ ಬೈ ಸೆಕ್ಷನ್ ಓದಿ ನಮ್ಮ ಅಧಿಕಾರ ವ್ಯಾಪ್ತಿ ಬಗ್ಗೆ ಚರ್ಚೆ ಮಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆ. ನನ್ನ ಪಾಯಿಂಟ್ ಆಫ್ ಆರ್ಡರ್ ಇಷ್ಟೆ. ಅವರು ಖುಸಿಗಿ ಮಸೂದೆ ತಂದು ಲೋಕಾಯುಕ್ತ ವಿಧೇಯಕಕ್ಕೆ ತಿದ್ದುಪಡಿ ಮಾಡಲಿಕ್ಕೆ ಅವರಿಗೆ ಅವಕಾಶ ಇದೆ. ಅವರು ಈ ಬಗ್ಗೆ ತಿದ್ದುಪಡಿಯನ್ನು ತಂದಾಗ ಇದರ ಬಗ್ಗೆ ಚರ್ಚೆ ಮಾಡಬಹುದು. ಇದು ಸಂಪೂರ್ಣವಾದ, ಪರಿಪೂರ್ಣವಾದ ಕಾಯಿದೆ ಯಾಗಿದೆ ಎಂದು ನಾನು ಹೇಳಿಲ್ಲ. ಆದರೆ, ಈ ಕಾನೂನು ದೇಶದಲ್ಲಿಯೇ ಶೇಷ್ಠವಾದಂಥ ಕಾನೂನು ಆಗಿದೆ. ಮಂಖ್ಯಿ ಮಂತ್ರಿಗಳೂ ವಿಚಾರಣೆಗೆ ಒಳಗಾಗುತ್ತಾರೆ. ಬೇರೆ ಯಾವುದೇ ರಾಜ್ಯದಲ್ಲಿ ಇಂತಹ ಕಾನೂನು ಇಲ್ಲ. ನಾವು ಅನೇಕ ಸಲ ಹೇಳಿದ್ದೇವೆ. ಕೇಂದ್ರಸರ್ಕಾರದವರ ತರಹ ಲೋಕಪಾಲ ಮಾದರಿಯ ಬಿಲ್ಲನ್ನು ತಂದರೂ, ನಾವು ಒಪ್ಪಿಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಈಗ ಈ ವಿಷಯದ ಬಗ್ಗೆ ಚರ್ಚೆ ಮಾಡುವುದು ಸಾಧ್ಯವಲ್ಲ. ಬೇಕಾದರೆ ತಿದ್ದುಪಡಿ ತೆಗೆದುಕೊಂಡು ಬರಲಿ, ಆಗ ಚರ್ಚೆ ಮಾಡೋಣ. ಈ ಬಿಲ್ಲನ್ನು ಹಿಂದೆ ಸಾಕಷ್ಟು ಚರ್ಚೆ ಮಾಡಿ ಪಾಸ್ ಮಾಡಿದ್ದೀರಿ. ಪುನಃ ಈಗ ಇದಕ್ಕೆ ಅರ್ಥ, ವಿವರಣೆ ಕೊಡುವುದು ಅನಾವಶ್ಯಕ. ಆದುದರಿಂದ ಇದನ್ನು ಇಲ್ಲಿಗೆ ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ತಾವು ಹೇಳಿದ್ದೂ ಕೇಳಿದ್ದೇನೆ, ವಿರೋಧಪಕ್ಷದ ನಾಯಕರಾದ ಶ್ರೀವಂತಿ ನಾಗರತ್ನಮ್ಮನವರು ಹೇಳಿದ್ದು ಕೇಳಿದ್ದೇನೆ, ಮಾನ್ಯ ಬಂಗಾರಪ್ಪನವರು ಹೇಳಿದ್ದೂ ಕೇಳಿದ್ದೇನೆ. ಮೂರು ಜನರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಪಾರ್ಲಿಮೆಂಟ್ ಅಫೈರ್ಸ್ ಮಂತ್ರಿಗಳೂ ಎತ್ತಿದ್ದಾರೆ. ನಾನು ಸವಿಸ್ತಾರವಾಗಿ ಎಲ್ಲರನ್ನೂ ಕೇಳಿದ್ದೇನೆ. ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಆದ್ದರಿಂದ ಈ ವಿಷಯವನ್ನು ಇಲ್ಲಿಗೆ ಮುಗಿಸಂತ್ತೇನೆ. ತಾವು ಏನು ಅವಕಾಶ ಕೊಡಬೇಕೆಂದು ಹೇಳುತ್ತೀರಿ, ಅದಕ್ಕೆ ನಾನು ಹೇಳಿದ್ದೇನೆ, ನನ್ನ ಚೇಂಬರಿಗೆ ಬನ್ನಿ, ತಿಳಿಯ ಜನ ಅನುಭವಸ್ಥರು ಬಂದು ಡಿಸ್‌ಕಸ್ ಮಾಡೋಣ. ಯಾವ ವ್ಯಾಪ್ತಿಯಲ್ಲಿ ಇದನ್ನು ಚರ್ಚೆ ಮಾಡೋಣ ಅಥವಾ ಬಿಡೋಣ ಎಂಬುದನ್ನು ವಿಚಾರ ಮಾಡೋಣ. ಈ ಸಭೆಯಲ್ಲಿ ನಾನು ಕೊಟ್ಟಂಥ ತೀರ್ಮಾನವನ್ನು ಪುನರ್ ವಿಮರ್ಶೆ ಮಾಡುವುದಕ್ಕೆ ಬರುವದಿಲ್ಲ. ಏನಾದರೂ ಅವಕಾಶ ಕೊಡುವುದಾದರೆ, ನನ್ನ ಚೇಂಬರಿನಲ್ಲಿ ಅವಕಾಶ ಕೊಟ್ಟು, ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಆದ್ದರಿಂದ ಈ ವಿಷಯ ಇಲ್ಲಿಗೆ ಮುಗಿಯಿತು. ಮುಂದಿನ ವಿಷಯ ಗಮನ ಸೆಳೆಯುವ ಸೂಚನೆ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಅವರ ವಿಷಯಕ್ಕೂ, ನನ್ನ ವಿಷಯಕ್ಕೂ ಸಂಬಂಧ ಇಲ್ಲ. ನಾನು ಕೊಟ್ಟಿರುವ ನಿಲುವಳಿ ಸೂಚನೆಗೆ, ತಮ್ಮ ಕಾರ್ಯಾಲಯದಿಂದ ಈ ರೀತಿ ರಿಪ್ಲೈ ಬಂದಿದೆ.

"With reference to your notice of adjournment motion regarding the atrocities committed on harijans in Thuruvanur, Chitradurga District I am directed to state that hon Speaker has withheld his consent to admit the same, as this subject has already been discussed in the current session."

ಎಂದು ಹೇಳಿದ್ದಾರೆ. ನಾನು ತಮಗೆ ಹೇಳಬೇಕಾದ್ದು ಇಷ್ಟೆ. ಇದೇ ಮ್ಯಾಟರ್ ಬಗ್ಗೆ, ಈ ಸದನದಲ್ಲಿ ಡಿಸ್‌ಕಸ್ ಮಾಡಿದ್ದಾರೆಂದು ಹೇಳಿದ್ದೀರಿ. ಚಿತ್ರದುರ್ಗ ಜಿಲ್ಲೆಯ ವಿಷಯದ ಬಗ್ಗೆ ಮಾತ ನಾಡಿಯೇ ಇಲ್ಲ. ಬೆಂಡಿಗೇರಿ ಘಟನೆ ಬಗ್ಗೆ ಮಾತ್ರ ಮಾತನಾಡಿದ್ದಾರೆ. ಈ ಘಟನೆ ಬಗ್ಗೆ ಯಾರು ಮಾತ ನಾಡೇ ಇಲ್ಲ. ಈ ಘಟನೆ ನಡೆದಿರುವುದು ೨೧ನೇ ತಾರೀಖು. ಹರಿಜನರ ಮೇಲೆ ದಬ್ಬಾಳಿಕೆ ಆಗಿದೆ.....

ಅಧ್ಯಕ್ಷರು.—ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ಈ ಬಗ್ಗೆ ಮಾತ ನಾಡುವುದಕ್ಕೆ ಅವಕಾಶ ಇದೆ. ಸರ್ಕಾರದವರು ಏನು ಹೇಳುತ್ತಾರೋ ನೋಡೋಣ.....

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಇಂತಹ ಘಟನೆಗಳು ಒಂದರ ಮೇಲೆ ಒಂದು ಬರುತ್ತಿವೆ. ೨೨, ೨೪, ೨೫ನೇ ತಾರೀಖಿನ ಎಲ್ಲಾ ಪತ್ರಿಕೆಗಳೂ ಬಂದಿದೆ. ಪತ್ರಿಕೆಗಳಲ್ಲಿ ಬಂದಿರುವ ವರದಿ ಪ್ರಕಾರ ೧೦೦ ಹರಿಜನ ಗುಡಿಸಲುಗಳನ್ನು ಸುಟ್ಟುಹಾಕಿದ್ದಾರೆ. ಚಿತ್ರದುರ್ಗ ಜಿಲ್ಲೆ ತುರುವನೂರಿನಲ್ಲಿ ಈ ಘಟನೆ ನಡೆದಿದೆ. ಮೇಲ್ಜಾತಿಯವರೇ ಸುಟ್ಟುಹಾಕಿದ್ದಾರೆಂದು ಬಂದಿದೆ. ಮನೆಗಳಿಗೆ ಬೆಂಕಿ ಹಚ್ಚಿದ್ದಾರೆಂದು ಬಂದಿದೆ. ಇದರ ಬಗ್ಗೆ ಚರ್ಚೆಯಾಗಬೇಕು...

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ನವರೇ, ಈಗ ಆ ಸಬ್ಜೆಕ್ಟ್ ಮ್ಯಾಟರ್‌ಗೆ ಹೋಗುವುದು ಬೇಡ. ನಾನು ರೂಲಿಂಗ್ ಕೊಟ್ಟಿದ್ದೇನೆ. ನೀವೇನಾದರೂ ಕನ್‌ವೀನ್ಸ್ ಮಾಡುವುದಾದರೆ ನಮ್ಮ ಚೇಂಬರಿಗೆ ಬನ್ನಿ. ಸರ್ಕಾರದವರು ಒಪ್ಪುತ್ತಾರೋ, ಏನೋ ನೋಡೋಣ...

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಒಂದೇ ಒಂದು ವಿಷಯ ಹೇಳುತ್ತೇನೆ. ತಾವು ರೂಲಿಂಗ್ ಕೊಟ್ಟಿದ್ದೀರಿ. ನಮಗೂ ಆದನ್ನು ಕಳಂಹಿಸಿಕೊಟ್ಟಿದ್ದೀರಿ. ಆದರ ಹಿಂದಿನ ಒಂದು ಪೋರ್ಷನ್‌ನನ್ನು ಯಾರೂ ನೋಡಲಿಲ್ಲ. ತಮ್ಮನ್ನು ನಾನು ಕೊಶ್ಚನ್ ಮಾಡುತ್ತಿಲ್ಲ ಹಾಗೂ ತಮ್ಮ ರೂಲಿಂಗ್‌ನ್ನು ನಾನು ಕೊಶ್ಚನ್ ಮಾಡುತ್ತಿಲ್ಲ. ಒಂದೇ ಒಂದು ವಿಚಾರ ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. In Kaul and Shakdher, it has been stated thus :

> "Where the Speaker is satisfied that the matter proposed to be discussed is prima facie in order under the rules, he gives his consent to the moving of the motion.
>
> Where, however the Speaker is satisfied that the notice of an adjournment motion is prima facie inadmissible, he refused his consent without bringing the matter before the House and the Member concerned is informed of the Speaker's decision.
>
> Where it is a border-line case or the Speaker is not in possession of full facts to decide the admissibility of a notice, he may mention in the House the receipt of the motion and after hearing a brief statement from the member and or the Minister concerned whether the matter sought to be raised is within the rules give his decision on merit."

ನಾವು ತಮ್ಮ ಮುಂದೆ ಒಂದು ಮೋಷನ್ ಕೊಡುತ್ತೇವೆ. ಆದರಲ್ಲಿ ಎಲ್ಲವನ್ನೂ ಬರೆದಿರುವುದಿಲ್ಲ. ಎಲ್ಲಾ ವಿಷಯವನ್ನೂ ಹೇಳಿರುವುದಿಲ್ಲ. ಅದು ಸಾಧ್ಯವೂ ಇಲ್ಲ. ಅಲ್ಲಿ ಎಲ್ಲಾ ವಿಷಯವನ್ನೂ ಹೇಳು ವಂತಹ ಪ್ರಶ್ನೆ ಬರುವುದಿಲ್ಲ ಆದರೆ ತಾವು ಕನ್‌ವಿನ್ಸ್ ಆಗುವುದಕ್ಕೋಸ್ಕರ ಕೆಲವು ವಿಷಯಗಳನ್ನು ಮಾತ್ರ ಹೇಳುವುದಕ್ಕೆ, ಇದನ್ನು ತಾವು ಏತಕ್ಕೆ ಒಪ್ಪಿಕೊಳ್ಳಬೇಕೆಂದು ಹೇಳುವುದಕ್ಕೆ ಅವಕಾಶ ಕೊಟ್ಟು, ಆ ಅವಕಾಶ ಆದ ಮೇಲೆ ತಾವು ರೂಲಿಂಗ್ ಕೊಡಬೇಕು. ಈಗ ತಾವು ಆ ಅವಕಾಶಕ್ಕೆ ಪರ್ಮಿಷನ್ ಕೊಡುವುದಿಲ್ಲ ಎಂದು ಹೇಳುತ್ತಿದ್ದೀರಿ. ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ, ಸರ್ಕಾರದವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಬಾರ್ಡರ್ ಲೈನ್ ಇದ್ದ ಸಮಯದಲ್ಲಿ ತಾವು ವಿಚಾರ ಮಾಡಿ ತಮ್ಮ ನಿರ್ಣಯ ಕೊಡಬೇಕೆಂದು ಇದೆ. ತಾವು ಇದನ್ನೆಲ್ಲಾ ನೋಡಿದ್ದೀರಿ ಎಂದು ನನ್ನ ಭಾವನೆ. ಅವರು ಏನು ನೋಟೀಸ್ ಕೊಟ್ಟಿದ್ದಾರೆ, ಅದರಲ್ಲಿ ಅವರು ಏನು ವಿಷಯ ಪ್ರಸ್ತಾಪ ಮಾಡಿದ್ದಾರೆ ಅದನ್ನೂ ಹಾಗೂ ಅದಕ್ಕೆ ಸಂಬಂಧಪಟ್ಟ ವಿವರಗಳನ್ನು ಅದರಲ್ಲಿ ತೋರಿಸಬೇಕಾಗಿದೆ. ಅದನ್ನು ಅವರು ತೋರಿಸಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಅವುಗಳನ್ನೆಲ್ಲಾ ತಾವು ಗಮನಕ್ಕೆ ತೆಗೆದುಕೊಂಡು ತೀರ್ಮಾನ ತೆಗೆದುಕೊಂಡಿದ್ದೀರಿ. ಈ ಹಂತ ಮುಕ್ತಾಯವಾಗಿ ಹೋಗಿದೆ. ಈಗ ಮುಂದಿನ ಹಂತಕ್ಕೆ ಬಂದಿದ್ದೇವೆ. ಹಿಂದೆ ತಾವು ಏನು ಪೂರ್ಣ ನಿರ್ಣಯ ಕೊಟ್ಟಿದ್ದೀರಿ, ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಮಾನ್ಯ ಸದಸ್ಯರ ಮನಸ್ಸಿನಲ್ಲಿ ಇದ್ದರೆ, ಅದರ ಬಗ್ಗೆ ವಿಚಾರ ವಿನಿಮಯ ಮಾಡಿ ನಂತರ ತಮ್ಮ ತೀರ್ಮಾನವನ್ನು ಕೊಡುವುದಕ್ಕೆ ಅವಕಾಶ ಇದೆ. ಇಲ್ಲಿ ಇದಕ್ಕೆ ಮುಂಕ್ತಾಯ ಆಗಬೇಕಾಗಿದೆ. ಇದು ಇಲ್ಲಿ ಮುಂಕ್ತಾಯವಾಗಿದೆ ಎಂದು ತಾವು ಘೋಷಣೆ ಮಾಡಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಅವರು ತಪ್ಪು ಅರ್ಥ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು.—ನೀವು ಇದರ ಬಗ್ಗೆ ಏನಾದರೂ ರೆಪ್ರೆಸೆಂಟ್ ಮಾಡಬೇಕೆಂದು ಇದ್ದರೆ ನೀವು ಚೇಂಬರ್‌ಗೆ ಬನ್ನಿ. ನಾನು ಹೇಳಿದಂತೆ ಇದರ ಬಗ್ಗೆ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸುವಾಗ ಮಾತನಾಡಬಹುದು, ಕಾಲಿಂಗ್ ಅಟೆನ್‌ಷನ್ ಕೊಡಿ ಎಂದು ಹೇಳಬಹುದು, ರೂಲ್ ೬೮ರ ಪ್ರಕಾರ ಅವಕಾಶ ಕೊಡಿ ಎಂದು ಹೇಳಬಹುದು. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ನನ್ನ ಚೇಂಬರ್‌ನಲ್ಲಿ. ಅಲ್ಲಿ ಬಂದು ನೀವು ಕನ್‌ವಿನ್ಸ್ ಮಾಡಿರಿ. ಅಲ್ಲಿ ನಾನು ತೀರ್ಮಾನ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ತಮ್ಮ ಅಧಿಕಾರದ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ ತಮ್ಮ ತೀರ್ಮಾನವನ್ನು ವಿಥ್‌ಡ್ರಾ ಮಾಡುವುದಕ್ಕೆ ತಮಗೆ ಅಧಿಕಾರ ಇದೆ, ಪುನರ್ ವಿಮರ್ಶೆ ಮಾಡುವುದಕ್ಕೆ ಅಧಿಕಾರ ಇದೆ, ಕನ್‌ಸೆಂಟ್ ಕೊಡುವುದಕ್ಕೆ ಅಧಿಕಾರ ಇದೆ. ಆದರೆ ಒಂದೇ ಒಂದು ವಿಚಾರ ಎಂದರೆ, ತಪ್ಪು ಅರ್ಥ ಬರುವ ರೀತಿಯಲ್ಲಿ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ.

ಅಧ್ಯಕ್ಷರು.—ತಪ್ಪು ಅಭಿಪ್ರಾಯ ಯಾರು ಕೊಟ್ಟರೂ ನಾನು ಕೇಳುವುದಿಲ್ಲ. ನೀವು ಕೊಟ್ಟರೂ ಕೇಳುವುದಿಲ್ಲ, ಅವರು ಕೊಟ್ಟರೂ ಕೇಳುವುದಿಲ್ಲ. ನಾನೂ ಕಾಯಿದೆ ಓದಿದ್ದೇನೆ. You please convince me under what provision I should take it. You please tell me.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಬಾರ್ಡರ್ ಲೈನ್ ವಿಷಯ ನಾನು ಮಾತನಾಡುತ್ತಿಲ್ಲ.

> "It says,
>
> Where it is a border-line case or the Speaker is not in possession of full facts to decide the admissibility of a notice,....."

You are not in a position of full facts to decide it because we have not given the full facts to you. ನಾವು ಕೊಟ್ಟಿರುವುದು ಅಡ್‌ಜರ್ನ್‌ಮೆಂಟ್ ಮೋಷನ್. ನನ್ನ ಅನುಭವದ ಒಳಗೆ ಅಡ್‌ಜರ್ನ್‌ಮೆಂಟ್ ಮೋಷನ್‌ನಲ್ಲಿ ಎಲ್ಲವನ್ನೂ ಬರೆಯುವುದಕ್ಕೆ ಆಗುವುದಿಲ್ಲ, ಫುಲ್ ಫ್ಯಾಕ್ಟ್‌ಸ್ ಕೊಡುವುದಕ್ಕೆ ಆಗುವುದಿಲ್ಲ ಸ್ವಲ್ಪ ಫ್ಯಾಕ್ಟ್‌ಸ್ ಕೊಡುತ್ತೇವೆ. ಅದನ್ನು ಕೇಳಿ ತಾವು ತೀರ್ಮಾನ ಮಾಡಬಹುದು. ಇಲ್ಲಿ ಬಾರ್ಡರ್ ಲೈನ್ ಪ್ರಶ್ನೆ ಬರುವುದಿಲ್ಲ. ಇದನ್ನು ಮಾನ್ಯ ಮಂತ್ರಿಗಳು ಟ್ವಿಸ್ಟ್ ಮಾಡಿ ಹೇಳಿದ್ದಾರೆ, ಏತಕ್ಕೆ ಅವರು ಟ್ವಿಸ್ಟ್ ಮಾಡಿದರೋ ಗೊತ್ತಿಲ್ಲ. ಫುಲ್ ಫ್ಯಾಕ್ಟ್‌ಸ್ ತಿಳಿದುಕೊಂಡರೆ ತಾವು ಹೇಳಬಹುದು.

ಅಧ್ಯಕ್ಷರು.—ನಾನು ಈಗಾಗಲೇ ಇದರ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ. ರೂಲಿಂಗ್ ಕೊಟ್ಟ ಮೇಲೂ ನಿಮ್ಮನ್ನು ಕೇಳಿ ಆಗಿದೆ, ಸರ್ಕಾರದವರೂ ಹೇಳಿ ಆಗಿದೆ. ಅವರು ಇದರ ಬಗ್ಗೆ ಬಂದು ತಮ್ಮ ಚೇಂಬರ್‌ನಲ್ಲಿ ಹೇಳಿದ ಮೇಲೆ, ತಮಗೆ ಏನಾದರೂ ಕನ್‌ವಿನ್ಸ್ ಆಯಿತು ಎಂದರೆ ನೀವು ಸೂಕ್ತವಾದ ತೀರ್ಮಾನ ತೆಗೆದುಕೊಳ್ಳಬಹುದು. ತಮ್ಮ ತೀರ್ಮಾನವನ್ನು ರಿವೈಸ್ ಮಾಡಬಹುದು, ಕಾಲಿಂಗ್

ಆಟೆನ್‌ಷನ್ ಆಗಿ ಮಾಡಬಹುದು ರೂಲ್ ೬೮ ಪ್ರಕಾರ ಅವಕಾಶ ಕೊಡಬಹುದು. ನಿಮಗೆ ಅಧಿಕಾರ ಇದೆ, ಆದರೆ ಇಲ್ಲಿ ಅನನ್ನು ಮುಂದುವರಿಸಲು ಬರುವುದಿಲ್ಲ, ಒಂದು ಬಾರಿ ತೀರ್ಮಾನ ಕೊಟ್ಟಮೇಲೆ ಅದೇ ಅಂತಿಮ ಎಂಬ ಮಾತನ್ನು ಅವರೂ ಹೇಳಿದ್ದಾರೆ. ತಾವು ಸೀನಿಯರ್ ಮೋಸ್ಟ್ ಲೆಜಿಸ್ಲೇಟರ್ ಇದ್ದೀರಿ. ನಿಮಗೆ ನಾನು ಇದನ್ನೆಲ್ಲಾ ಹೇಳಿಕೊಡಬೇಕೆ. You are a good lawyer but you are arguing a bad case.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ರಕ್ಷಣೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಈಗ ರೂಲಿಂಗ್ ಕೊಟ್ಟು ಆಗಿದೆ. ತಾವು ದಯವಿಟ್ಟು ನನ್ನ ಚೇಂಬರ್‌ಗೆ ಬನಿ. ನನ್ನನ್ನು ಕನ್‌ವಿನ್ಸ್ ಮಾಡಿರಿ. ಒಂದು ತಾಸು ನಾನು ಅಲ್ಲಿರುತ್ತೇನೆ. ತಾವು ದಯವಿಟ್ಟು ಕುಳಿತು ಕೊಳ್ಳಿ. ಈಗ ಗಮನ ಸೆಳೆಯುವ ಸೂಚನೆಗಳು. ಶ್ರೀ ಬಿ. ಎಸ್. ಯಡಿಯೂರಪ್ಪನವರು.

ಗಮನ ಸೆಳೆಯುವ ಸೂಚನೆ

ಪಂಚಗಂಗಾ ನದಿಯ ನೀರನ್ನು ನೀರಾವರಿಗೆ ಉಪಯೋಗಿಸದಂತೆ ನಿಷೇಧಾಜ್ಞೆ ಹೊರಡಿಸಿ ಹೊರ ರಾಜ್ಯದವರಿಗೆ ಅನುಕೂಲ ಮಾಡಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಮೇಲಿನ ವಿಷಯದ ಬಗ್ಗೆ ನಾನು ಮಾನ್ಯ ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿ ಯೋಜನಾ ಸಚಿವರು) —ಮಾನ್ಯ ಅಧ್ಯಕ್ಷರೇ ಈ ಕೆಳಕಂಡ ಹೇಳಿಕೆಯನ್ನು ನಾನು ಕೊಡಬಯಸುತ್ತೇನೆ. ಮಹಾರಾಷ್ಟ್ರ ರಾಜ್ಯದ.....

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಇದು ಯಾವ ವಿಚಾರ ಎಂದು ನನಗೆ ಗೊತ್ತಾಗಲಿಲ್ಲ.....

ಅಧ್ಯಕ್ಷರು.—ನಿಮ್ಮ ನಿಲುವಳಿ ಸೂಚನೆ ಮತ್ತು ಶ್ರೀ ಎಂ. ಎಸ್. ಕೃಷ್ಣನ್‌ನವರು ತಂದ ಎರಡು ವಿಷಯಗಳು ಬಿಟ್ಟು ಈಗ ಮೂರನೇ ವಿಷಯಕ್ಕೆ ಹೋಗಿದ್ದೇವೆ.....

ಶ್ರೀ ಎಸ್. ಬಂಗಾರಪ್ಪ.—ನಾವು ತಂದಂತಹ ನಿಲುವಳಿ ಸೂಚನೆಗೆ ತಾವು ಆದ್ಯತೆಯನ್ನು ಕೊಡಲೇಬೇಕು.

ಅಧ್ಯಕ್ಷರು.—ನಿಮ್ಮ ಮತ್ತು ಎಂ. ಎಸ್. ಕೃಷ್ಣನ್‌ನವರು ತಂದಂತಹ ವಿಷಯ ಮುಗಿದು ಈಗ ಗಮನ ಸೆಳೆಯುವ ಸೂಚನೆಗೆ ಹೋಗಿದ್ದೇವೆ. ಅದೇ ರೀತಿ ಶ್ರೀ ಯಡಿಯೂರಪ್ಪನವರು ಮಾನ್ಯ ಮಂತ್ರಿಗಳ ಗಮನ ಸೆಳೆದಿದ್ದಾರೆ. ಈಗ ಮಾನ್ಯ ಯೋಜನಾ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಈ ವಿಷಯದಲ್ಲಿ ಚರ್ಚೆಯಾಗಲೇಬೇಕು. ನೀವು ನಮಗೆ ದಯವಿಟ್ಟು ಅವಕಾಶ ಮಾಡಿಕೊಡಿ.

MR. SPEAKER.—The matter has been closed.

SRI S BANGARAPPA.—I am sorry, ನೀವು ಮಾನ್ಯ ಸದಸ್ಯರಾದ ಎಂ. ಎಸ್ ಕೃಷ್ಣನ್‌ರವರಿಗೆ ಅವಕಾಶ ಕೊಟ್ಟಿದ್ದೀರೆಂದು ತಿಳಿದು, ನಿಮಗೆ ಗೌರವ ಕೊಟ್ಟು ನಾವು ಕುಳಿತು ಕೊಂಡಿದ್ದುದು, ಅಂದ ಮೇಲೆ ನಿಮ್ಮ ವಿಷಯ ಮುಗಿದು ಹೋಯಿತು ಎಂದರೆ ಹೇಗೆ ? ದಯವಿಟ್ಟು ತಾವು ವಿಷಯ ಚರ್ಚೆ ಮಾಡುವುದಕ್ಕೆ ಈ ಸಭೆಯಲ್ಲಿ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಮಾನ್ಯ ಕಂದಾಯ ಮಂತ್ರಿ ಯೋಜನಾ ಸಚಿವರ ಉತ್ತರವಲ್ಲದೇ ಬೇ ಯಾವುದನ್ನು ರೆಕಾರ್ಡ್ ಮಾಡಬಾರದು.* * *

***Not recorded as ordered by the Chair.